ಅಪರಂಜಿ

ಸೆಪ್ಟೆಂಬರ್

1992

ತಿಳಿನಗೆಯ ಕಾರಂಜಿ



* ಪ್ರಕಾಶ್
* ವಿಕಟಕವಿ
* ಅ.ರಾ.ಸೇ.
* ಕಂಬಂ ಕೃಷ್ಣಮೂರ್ತಿ
* ಶೀನೂ
* ಸುಶೀಲಾ ಸೂರ್ಯನಾರಾಯಣ
* ಶಿವು
* ಸಿ. ಆರ್. ಸತ್ಯ
* ರಘುನಾಥ್
* ಶಾಂತಾರಘು

ಬಿಡಿ ಪ್ರತಿ : 2 ರೂ. 50 ಪೈ.



ಸಂಪುಟ ೯ ಸೆಪ್ಟೆಂಬರ್ ೧೯೯೨ ಸಂಚಿಕೆ ೧೨

ಕ್ಲಾಸಿನಲ್ಲಿ ಮಹಾಭಾರತದ ಪಾರ ನಡೀತಿತ್ತು. ರಶ್ಮಿ ಮೇಡಂ ಬಹಳ ಚೆನ್ನಾಗಿ ಅರಗಿನ ಮನೆ ಪ್ರಸಂಗ ಹೇಳ್ತಾ ಇದ್ರು. ಧುರ್ಯೋಧನ ಅರಗಿನ ಮನೆ ಕಟ್ಟಿಸಿದ್ದು. ಪಾಂಡವರು ಅಲ್ಲಿಗೆ ಹೋಗಿದ್ದು. ಮನೆಗೆ ಬೆಂಕಿ ಇಡಿಸಿದ್ದು. ಪಾಂಡವರು ಕಳ್ಳ ದಾರೀಲಿ ಕಾಡಿಗೆ ತಪ್ಪಿಸಿಕೊಂಡು ಹೋಗಿದ್ದು ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಮೇಡಂ ಮಕ್ಕಳಿಗೆ ತಿಳಿಸಿದ್ರು. ಭೀಮನ ಪ್ರತಾಪವನ್ನೆಲ್ಲಾ ವರ್ಣಿಸಿದ ಮೇಲೆ, ರಶ್ಮಿ ಪುಟಾಣಿ ಶೀಲಾಳನ್ನು ಕುರಿತು.

"ಶೀಲಾ ಈ ಪಾರದಿಂದ ಏನು ಕಲಿತುಕೊಂಡೆ? ಅಂತ ಕೇಳಿದರು. ಶೀಲಾ ಎದ್ದು ನಿಂತು.

"ಮತ್ತೇ ಮತ್ತೇ ಕಂಟ್ರಾಕ್ಟರುಗಳನ್ನು ನಂಬಬಾರದು ಮೇಡಂ" ಅಂದ್ಬಿಡೋದೇ.

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು ;
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ
2 ರೂ. 50 ಪೈ.
ವಾರ್ಷಿಕ ಚಂದಾ
25 ರೂ.
ಆಜೀವ ಚಂದಾ
250 ರೂ.

ವಿಳಾಸ
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೯ ಸೆಪ್ಟೆಂಬರ್ ೧೯೯೨ ಸಂಚಿಕೆ ೧೨

ಶ್ರೇಯಸ್ಸು ಮತ್ತು ಪ್ರೇಯಸ್ಸು ಮನುಷ್ಯನ ಬಳಿಗೆ ಬರುತ್ತವೆ. ಧೀಮಂತನು ಶ್ರೇಯಸ್ಸನ್ನು ಆರಿಸಿಕೊಳ್ಳುವನು. ಅವಿವೇಕಿಯು ಯೋಗ ಕ್ಷೇಮಕ್ಕಾಗಿ ಪ್ರೇಯಸ್ಸನ್ನು ಆರಿಸಿಕೊಳ್ಳುತ್ತಾನೆ.

— ಕಠ

ಇದು ಯಮನು ನಚಿಕೇತನಿಗೆ ಹೇಳುವ ಮಾತು. ಶ್ರೇಯಸ್ಸು ಎಂದರೆ ಮೋಕ್ಷ. ಪ್ರೇಯಸ್ಸು ಎಂದರೆ ಯೋಗ ಕ್ಷೇಮ. ಯೋಗ ಎಂದರೆ ಬಯಸಿದ್ದನ್ನು ಹೊಂದುವುದು, ಕ್ಷೇಮ-ಎಂದರೆ ಪಡೆದದ್ದನ್ನು ಉಳಿಸಿ ಇಟ್ಟುಕೊಂಡಿರುವುದು. ಶ್ರೇಯಸ್ಸು ಎಂದರೆ ಈಗ ಕಷ್ಟಕರ ವೆನಿಸಿದರೂ ಮುಂದೆ ಹಿತವನ್ನುಂಟುಮಾಡುವುದು ಔಷಧಿಯಂತೆ. ಪ್ರೇಯಸ್ಸು ಎಂದರೆ ಈಗ ಬಹಳ ಖುಷಿ ಕೊಡುತ್ತಿದ್ದು ಮುಂದೆ ಕೆಡುಕನ್ನುಂಟು ಮಾಡುವುದು—ಡ್ರಗ್ ಗಳಂತೆ.

ಇಂದಿನ ಸ್ಥಿತಿಯಲ್ಲೂ, ಲೋಕವ್ಯವಹಾರದಲ್ಲಿ ಇದು ನಿಜ. ತಮಗೆ ಯಾರೋ ಓಟು ಕೊಡುವರೆಂದು ಒಂದು ಜಾತಿ ಒಂದು ಗುಂಪನ್ನು ಎತ್ತಿ ಕಟ್ಟುವುದು ಪ್ರಿಯ. ಆದರೆ ಈ ಮಾರ್ಗವನ್ನನುಸರಿಸಿದವರ ಗತಿ ಏನಾಯಿತ್ತು ಎಂದು ಯೋಚಿಸುವ ಗೋಜಿಗೆ ಅಂತಹವರು ಹೋಗುವುದಿಲ್ಲ. ಈ ನೀತಿಯನ್ನನುಸರಿಸಿದ್ದರಿಂದಲೇ ಸತ್ಯ, ಅಹಿಂಸೆಗಳ ಮಾತಿನಿಂದ, ಎಲ್ಲೆಲ್ಲಿಯೂ ತಲೆಯೆತ್ತುವ ವಿಚ್ಛಿದ್ರಕಾರೀ ಶಕ್ತಿಗಳನ್ನಡಗಿಸಿ ಏಕತೆಯನ್ನು ಬೆಳೆಸುವ ಮಾತು ಕೇಳಿಬರುತ್ತದೆ.


ಸ್ವ-ರಾಜ್ಯದ ಮಾತೇ ಇಲ್ಲ, ಆರ್ಥಿಕ ಸುಧಾರಣೆಗಳಿಂದ ಏನೋ ದೊಡ್ಡದು ಸಿಗುತ್ತದೆ ಎಂಬ ನಿರೀಕ್ಷೆ. ಪೋರ್ಟ್ ಫೋಲಿಯೋ ಷೇರು ಹಗರಣಗಳು ಇದರ ಮೊದಲ ಫಲವೆನ್ನುವುದು ಕುಹಕವಾದೀತು.

ಸರ್ವ ಧರ್ಮ ಸಮಭಾವ ಎಂಬುದರ ಆಚರಣೆ ಹೇಗಾಗುತ್ತಿದೆ ?

ಹೋಗಲಿ, ರಾಷ್ಟ್ರೀಯಮಾನದ ಕಲ್ಪನೆಯಾದರೂ ಇದೆಯೇ ?

ಪ್ರೇಯಸ್ಸನ್ನು ಆರಿಸಿಕೊಳ್ಳುವವರು ಅವಿವೇಕಿಗಳು ಎಂದು ಉಪನಿಷತ್ತು ಹೇಳುತ್ತದೆ.

ಅದು ನಿಜ ಎಂಬುದು ನಮ್ಮ ಅಭಿಪ್ರಾಯ.



ಪ್ರಕಾಶ್

ಗ್ರಾಹಕ ರಕ್ಷಣೆ ಭಿತ್ತಿ ಚಿತ್ರ ಸ್ಪರ್ಧೆ

ಪತ್ರಿಕೆ

ಸ್ಪರ್ಧೆಯ ಫಲಿತಾಂಶದ ಬಗ್ಗೆ ಗ್ರಾಹಕ ಮಂಡಲಿಗೆ ದೂರು ಬಂದರೆ?

* * *

'ಒಂದೇ ಮಗು' ಕಾಯ್ದೆಗೆ ವಕೀಲರ ಸಂಘದ ಆಗ್ರಹ.

—ಸುದ್ದಿ

ಇನ್ನೂ ಹುಟ್ಟದಿರುವ ಮಕ್ಕಳು ರಿಟ್ ಹಾಕುವುದು ಹೇಗೆ ? ?

* * *

ಇರುವ ಭೂಮಿಯಲ್ಲೇ ಅಧಿಕ ಲಾಭ ಗಳಿಸಲು ಕರೆ.

—ಪತ್ರಿಕೆ

ಸರ್ಕಾರದ ಕಾರ್ಯ ವೈಖರಿಯಂತಿದೆ !

* * *

ಮೇಯರ್ ಅಧಿಕಾರಾವಧಿ 3 ವರ್ಷ ಆಗಲಿ

—ಸುದ್ದಿ

ಮೂರು ದೇಶಗಳಿಗೆ ಹೋಗಿ ಬರಬಹುದು

* * *

ಪೋಲೀಸ್–ಸಾರ್ವಜನಿಕ ಸಂಪರ್ಕ ಸಭೆ

—ಸುದ್ದಿ

ಸಂಪರ್ಕ ನಿಕಟವಾಗದಿರುವುದು ಒಳಿತು !

*　　　*　　　*

ಹಾಲು ದರ ಏರಿಕೆ

—ಪತ್ರಿಕೆ

ಹೊಟ್ಟೆಗೆ ಒಂದು ಚಂಬು ಹಾಲು ಅನ್ನೋಗಾದೇನ ಇನ್ನು ಹೇಳೋ ಹಾಗಿಲ್ಲ !

*　　　*　　　*

ಭಾರತದಲ್ಲಿ ಜಪಾನಿನ ಮಾದರೀ ಕೈಗಾರಿಗೆಗಳು ಸ್ಥಾಪಕವಾಗುತ್ತವೆ

—ಸುದ್ದಿ

ಅಲ್ಲಿಯ ಕಾರ್ಮಿಕರು ನಮ್ಮಂತೆ ಆಗದಿರಲು ಸ್ಪೆಷಲ್ ಟ್ರೇನಿಂಗ್ ಕೊಡಬೇಕು !

*　　　*　　　*

ಒಡಕಿನ ಹಾದಿಯಲ್ಲಿ ಜನತಾ–ದಳ

—ಸುದ್ದಿ

ಪ್ರಕೃತಿ ನಿಯಮ ! ಒಂದೇ ದಳವಿರುವ ಹೂವಿದೆಯೇ ? ?

*　　　*　　　*

'ನಿರಂಕುಶ್' ಧಾರಾವಾಹಿ ತಡೆಗೆ ಲೋಕಸಭೆ ಆಗ್ರಹ.

—ಸುದ್ದಿ

ಅರ್ಥವಾಯಿತು !

ಬಾಣಸಿಗ

ವಿಕಟಕವಿ

ದೋಸೆಯ ರುಚಿಯನು ಸವಿಯುತ ನೀನು
ಆಹಾ ಎನ್ನುತ ನುಂಗುತಿಹೆ
ಅಡುಗೆಯ ಮನೆಯಾ ತಾಪದಿ ನಿಂದಿಹ
ಎನ್ನಯ ಗೋಳನು ನೀನರಿಯೆ ! 1

ಪಲ್ಯ ಚಟ್ನಿಗಳ ಕಂಪನು ಮೆಚ್ಚುತ
ಸಗ್ಗವ ಕೈಯಲ್ಲಿದೆ ಯೆನುವೆ ;
ಮಸಾಲೆದೋಸೆಗೆ ರೂಪವನಿತ್ತಾ
ನಳರಾಜನ ವೇದನೆ ಅರಿಯುವೆಯೆ ? 2

ನಿಶಿರಾತ್ರಿಯ ಕಾಲದಿ ರುಬ್ಬಿದ ನಂತರ
ಜನಿಸಿತು ನುಣ್ಣನೆ ಹಿಟ್ಟು
ಬಿಸಿ ಬಿಸಿ ಕಾವಲಿ ಹಿಂದೆಯೆ ನಿಂತು
ಪಳಗಿಹೆ ನಾ ದೋಸೆಯ ಬಿಟ್ಟು ! 3

ಹೋಟೆಲ್ ಭಕ್ತರ ಜಿಹ್ವ ಸಮೂಹಕೆ
ನೀಡುವೆ ಬ್ರಹ್ಮಾನಂದ
ಬೆಣ್ಣೆ ಮಸಾಲೆಯ ಮೆಲ್ಲುತ ನೀನು
ಪಡೆ, ಪಡೆ. ಪರಮಾನಂದ ! 4

(ಕುವೆಂಪು ಅವರ ಕ್ಷಮೆ ಇರಲಿ)

7

ಮತ್ತೊಮ್ಮೆ ಆದವಾನಿಗೆ

ವರ್ಷಕ್ಕೊಮ್ಮೆ ಆದವಾನಿಗೆ ಯಾತ್ರೆ ಹೋಗುವುದು ನನ್ನ ಪರಿವಾರ. ಈ ವರ್ಷ ಅಲ್ಲಿಗೆ ಹೋರಟಾಗ ಆದವಾನಿಯ ಬಗೆಗೆ ಏನನ್ನಾದರೂ ಏಕೆ ಬರೆಯಬಾರದು ಎನ್ನಿಸಿತ್ತು. ಈ ಹಿಂದೆಯೂ ಹೀಗೆ ಎನ್ನಿಸಿತ್ತು. ಆದರೆ ಮಹಾ ಮಹೋಪಾಧ್ಯಾಯರೊಬ್ಬರು, ಯಾರಾದರೂ ಎಲ್ಲಿಗಾದರೂ ಹೋದರೆ, ಯಾರೊಂದಿಗಾದರೂ ಮಾತನಾಡಿದರೆ, ಬರುವ ಭಿನ್ನಾಭಿಪ್ರಾಯಗಳನ್ನು ದಾಖಲಿಸುವುದು ಪ್ರವಾಸ ಸಾಹಿತ್ಯಕ್ಕೆ ಒಂದು 'must' ಎಂದು ಬರೆದಿದ್ದರು. ನಾನು ಎಲ್ಲಿಗಾದರೂ ಹೋದರೆ ನನಗೆ ಮುಖ್ಯವೆನಿಸಿದ್ದನ್ನು ವರದಿ ಮಾಡುವುದೇ ಮುಖ್ಯ ಎಂದು ಭಾವಿಸುವವನು.

ಆದವಾನಿ ಕನ್ನಡ ನೆಲ, ರಾಜಕೀಯವಾಗಿ ಅಲ್ಲ. ಭಾಷಾವಾರು ಪ್ರಾಂತಗಳ ರಚನೆಯಾದ ಮೇಲೆ ಅಲ್ಲಿನ ಕನ್ನಡ ಭಾಷಾಭಿಮಾನಿಗಳ 'ತಾಯಿನುಡಿಯ ಪ್ರೀತಿಗೆ ಒಂದು ವಿಧದ ತಣ್ಣೀರು ಎರಚಿದಂತಾಗಿದೆ. ನಮ್ಮ ನೆಲದಲ್ಲೇ ಹೀಗಾಗುತ್ತಿದೆ ಎಂದ ಮೇಲೆ ಅಲ್ಲಿ ಹಾಗಾಗುವುದು ಏನು ಮಹಾ ?

ಒಬ್ಬರು ಹೇಳಿದರು ; ಹೈದರಾಬಾದಿಗೆ ಸೇರಿದ್ದ ಕನ್ನಡನಾಡಿನ ಭಾಗದಲ್ಲಿ ಈಗ ಒಂದು ತೆಲುಗು ಪತ್ರಿಕೆಯನ್ನೇ ಕನ್ನಡಿಗರೂ ಓದುತ್ತಾರೆ – ಬಿಸಿ ಬಿಸಿ ಸುದ್ದಿಗಾಗಿ ಹೇಗಿದೆ ?

ಆದವಾನಿಯಲ್ಲಿ ಸುಪ್ರಸಿದ್ಧ ಸಂತಳಾದ ಶ್ರೀ ಲಕ್ಷ್ಮಮ್ಮನವರ ಸಮಾಧಿ ಮಂದಿರ ಪ್ರಸಿದ್ಧವಾದುದು. ಇದರ ಪ್ರಾಂಗಣದಲ್ಲಿ ಪಂಡಿತ ಜಸರಾಜರು ನಡೆಸಿದ ಸಂಗೀತ ಕಚೇರಿಯ ಸವಿನೆನಪು ಹಲವರಿಗಿದೆ.

ಆದವಾನಿ – ದೊಡ್ಡನ ಕೇರಿ ಮಾರ್ಗದಲ್ಲಿ. ಈ ಆದವಾನಿಯಲ್ಲಮ್ಮನವರ ದೇವಾಲಯವಿದೆ. ಸುಮಾರು ಒಂದು ದಶಕದ ಹಿಂದೆ ಸಂಭವಿಸಿದ ಒಂದು ಘಟನೆಯಾದಾಗಿ, ದೇವಾಲಯ ಈಗ ನಿದಾನವಾಗಿಯಾದರು ಖಚಿತವಾಗಿ ಅಭಿವೃದ್ಧಿಸುತ್ತಿದೆ.

ಈ ದೇವಾಲಯ ಐತಿಹಾಸಿಕವಾಗಿ ಪ್ರಸಿದ್ಧವಾಗಿದೆ. ಆದೇವಿಯ ಚರಿತ್ರೆಯ ಹಾಡಿನಲ್ಲಿ ಬರುವ ಎರಡು ಚರಣಗಳು ಹೀಗಿವೆ.

ದಿಲ್ಲಿ ಸುಲ್ತಾನನಿಗೆ ದೀವಟಿಗೆ ಹೊರಿಸಿದೆ
ದಿಳ್ಳಿ ಮಾಡಿದೆ ಅವನ ಮನೆಯೆಲ್ಲರ
ಅವನ ಹೆಂಡರಿಗೆಲ್ಲ ಪಡ್ಲಿಗೆಯ ಹೊರಿಸಿದೆ
ಬಲ್ಲಿದಳೆ ನೀನು ಪಾರಂಜ್ಯೋತಿಯು
ಆಕಾಶವನ್ನೆಲ್ಲ ಪಡ್ಲಿಗೆಯ ಮಾಡಿದೆ
ಶೇಷಾದ್ರಿಯೆಂಬೆರಡು ಜೋಗುಕೋಲು
ನಾಲ್ಕು ದಿಕ್ಕಿನ ಸುತ್ತ ಜೋಗನ್ನಾಕಿಸಿಕೊಂಬ
ಆಕೆ ಯಲ್ಲಮ್ಮಗಾರತಿನೆತ್ತಿರೆ

ಆದವಾನಿ ದಾವಣಗೆರೆಯ ತರಹದ ಒಂದು ಕೈಗಾರಿಕಾ ಕೇಂದ್ರ. ಅಲ್ಲಿನ ಮಣ್ಣಿನ ಗುಣದಿಂದಾಗಿ ಕೊಳೆ ಹೆಚ್ಚು. ಸುತ್ತ ಮುತ್ತಿನ ಹಿನ್ನೆಲೆ ಪ್ರದೇಶ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು, ಚಳ್ಳಕೆರೆ, ಹಿರಿಯೂರು ತಾಲ್ಲೂಕುಗಳ ಪ್ರದೇಶದಂತೆಯೇ ಇದೆ.

ಆದವಾನಿಯಲ್ಲಿ ಕಂಡು ಬರುವ ವಿಶೇಷ ಪ್ರಾಣಿ ಸಂಪತ್ತು ಕತ್ತೆಗಳು ಬಿಳಿ ಕತ್ತೆಗಳು. ಸಾಮಾನ್ಯ ಕತ್ತೆಗಳಿಗೆ ಹೋಲಿಸಿದರೆ ಗ್ಲ್ಯಾಮರ್ ಇರುವ ಪ್ರಾಣಿಗಳು ಅವು. ಸಾಲಾಗಿ ಅವು ಹೋಗುವುದನ್ನು ನೋಡುವುದು ಒಂದು ವಿಶೇಷ ಅನುಭವ.

ಈ ಬಾರಿ ಅಲ್ಲಿಗೆ ಹೋದಾಗ ನಾನು ಬದನೇ ಹಾಳಿನ ಶ್ರೀ ದತ್ತಾತ್ರೇಯ ಗೌಡರ ದರ್ಶನ ಮಾಡಿದೆ. ಕಳೆದ ನಾಲ್ಕು ವರ್ಷ ಅಲ್ಲಿಗೆ ಹೋದಾಗಲೂ ಅವರು ಸಿಕ್ಕಿರಲಿಲ್ಲ. ಗೌಡರು ಅಲ್ಲಿನ ಕರ್ಣಾಟಕ ಸಂಘದ ಪ್ರಮುಖ ಪದಾಧಿಕಾರಿಗಳು. ವಿಶಾಲ ಮನೋಭಾವದರು, ಆಧ್ಯಾತ್ಮ ಜೀವಿಗಳು: ಸಾರ್ವಜನಿಕ ಜೀವನದಲ್ಲೂ ಪ್ರಭಾವಶಾಲಿಗಳು.

ಅವರು ಹೇಳಿದ ಒಂದು ಪ್ರಸಂಗ ನನ್ನ ಮನಸ್ಸನ್ನು ವಿಶೇಷವಾಗಿ ಕಲಕಿತು. ದತ್ತಾತ್ರೇಯ ಗೌಡರ ಮುತ್ತ್ಯ ತಮ್ಮಿಗೌಡರು ಪ್ರಸಿದ್ಧ ಸಂತರಾದ ಮೈಸೂರು ವೇದಾಂತ ಶಿವರಾಮ ಶಾಸ್ತ್ರಿಗಳ ಶಿಷ್ಯರಾಗಿದ್ದರಂತೆ. ಶಿವರಾಮ ಶಾಸ್ತ್ರಿಗಳು ಆದವಾನಿ ಬಳಿಯ ಬದನೇ ಹಾಳಿಗೆ ಮತ್ತೇ ಮತ್ತೇ ಹೋಗುತ್ತಿದ್ದರಂತೆ. ಶಿವನೂ ರಾಮನು ಒಂದೆ ಎನ್ನುವುದನ್ನು ತೋರುವಂತಿದ್ದ ಶಾಸ್ತ್ರಿಗಳು ಗೌಡರಿಗೆ ಒಮ್ಮೆ ಹೇಳಿದರಂತೆ "ನಾನು ಇಲ್ಲೇ ದೇಹತ್ಯಾಗ ಮಾಡುತ್ತೇನೆ. ಆಗ ಈ ಘಟವನ್ನು ತುಂಡುತುಂಡಾಗಿ ಕತ್ತರಿಸಿ ಯಾರಿಗೂ ಸಿಕ್ಕದಂತೆ ಎಸೆದು ಬಿಡು."

ಗುರುವಿನ ಆಜ್ಞೆಯನ್ನು ಎದುರಿಸುವ ಧೈರ್ಯವಿಲ್ಲದ ಗೌಡರು "ಆಗಲಿ" ಎಂದರಂತೆ.

ಕೆಲವರ್ಷಗಳನಂತರ ಶಾಸ್ತ್ರಿಗಳು ಒದನೇ ಹಾಳಿಗೆ ಹೋದಾಗ ತಮ್ಮಿಗೌಡರು ಊರಲ್ಲಿರಲಿಲ್ಲ. ಶಾಸ್ತ್ರಿಗಳು ದೇಹತ್ಯಾಗ ಮಾಡಿಬಿಟ್ಟರು. ಗೌಡರ ಮಕ್ಕಳು ಶಾಸ್ತ್ರಿಗಳ ಪಾರ್ಥಿವ ಶರೀರವನ್ನು ದಹಿಸಲು ಏರ್ಪಾಟು ಮಾಡಿದರು. ಕೆಲದಿನಗಳಾದ ಮೇಲೆ ತಮ್ಮಿಗೌಡರು ಊರಿಗೆ ಬಂದು ವಿಷಯ ತಿಳಿದು ಖಿನ್ನರಾದರು. ಗುರುವಿನ ಮಾತನ್ನು ನಡೆಸಲಾಗಲಿಲ್ಲ. ಎಂಬ ವಿಷಾದ, ಭಯ ಅವರ ಮನಸ್ಸನು ಆವರಿಸಿತು. ಅವರು ತಮ್ಮ ಆಪ್ತರಾದ ಊರಿನ ಕರಣಿಕರ ಬಳಿಗೆ ಹೋಗಿ "ಸ್ವಾಮಿ" ನಾನು ವಚನ ಭ್ರಷ್ಟನಾದೆ ನನಗೆ ಸದ್ಗತಿ ಹೇಗೆ ದೊರಕೀತು? ಆದ್ದರಿಂದ ನೀವು ನನಗೆ ವಚನ ಕೊಡಿ. ನಾನು ಸತ್ತ ಮೇಲೆ ನನ್ನ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಎಸೆದು ಬಿಡಿ" ಎಂದರಂತೆ.

ಕರಣಿಕರು "ಸ್ವಾಮಿ, ಕೊಟ್ಟೇನು. ಆದರೆ ನಮ್ಮ ಗತಿಯೇನು? ಗುರುಗಳು ಪ್ರಾಪಂಚಿಕ ಸಂಬಂಧಗಳನ್ನೇ ತೊರೆದವರು. ಆದರೆ ನಮ್ಮ ಮಕ್ಕಳು ಮೊಮ್ಮಕ್ಕಳು ಬಹಳ ಜನರಿದ್ದಾರೆ. ನಿಮ್ಮ ದೇಹವನ್ನು ಕತ್ತರಿಸಿ ಹಾಕಿಸಿದರೆ ನನ್ನನ್ನು ಸಜೀವ ವಾಗಿಯೂ ಹಾಗೆ ಮಾಡಿಬಿಟ್ಟಾರು.

ಇಬ್ಬರೂ ನಕ್ಕರಂತೆ.

ಆದವಾನಿಯವರೇ ಆದ ಶ್ರೀ ವೀರಭದ್ರ ಕನ್ನಡದಲ್ಲಿ ಒಳ್ಳೆಯ ಬರಹಗಾರರು. ಅವರೀಗ ಮೈಸೂರಿನಲ್ಲಿ (ಬೆಂಗಳೂರಿನಲ್ಲಿ)? ನೆಲಸಿದ್ದಾರೆ.

ಆದವಾನಿಯವರೇ ಆದ ಶ್ರೀ ಜೆ. ಸದಾನಂದ ಶಾಸ್ತ್ರಿಗಳು ಆದವಾನಿ ಬಳಿಯಿರುವ ಕಮ್ಮಾರಥೇಮ ಗ್ರಾಮದವರು ನನಗೆ ತಿಳಿದಂತೆ ಕನ್ನಡದಲ್ಲಿ ಅಷ್ಟಾವ ಧಾನ ಕಾರ್ಯಕ್ರಮ ಕೊಡಲಾರಂಭಿಸಿದವರಲ್ಲಿ ಮೊದಲಿಗರು. ಈಗ್ಗೆ ಸುಮಾರು ಪತ್ತು ವರ್ಷಗಳ ಹಿಂದೆ ಅವರು ನಡೆಸಿಕೊಟ್ಟ ಅಷ್ಟಾವಧಾನದಲ್ಲಿ ನಾನು 'ಅಪ್ರಸ್ತುತ ಪ್ರಸಂಗ' ವಿಭಾಗದ ಪೃಚ್ಛಕನಾಗಿದ್ದೆ.

ಆದವಾನಿಯ ಬಳಿಯ ಹಣವಾಳ ಗ್ರಾಮದ ಶ್ರೀ ಎಚ್. ಕೆ. ರಘುನಾಥ್ ಎನ್ನುವವರು ತೆಲುಗು ಹಾಗೂ ಕನ್ನಡಗಳೆರಡರಲ್ಲೂ ಆಶುಕವಿಗಳು ಮತ್ತು ಜಾನಪದ ಗಾಯಕರು. ಅವರ ರಚನೆಗಳನ್ನು ಕುಮಾರ್ ಸಾನು ಅವರೂ

ಹಾಡಿದ್ದಾರೆ. ಅವರ ರಚನೆ ನನ್ನ ಗಮನಕ್ಕೆ ಬಂತು. ಅದನ್ನೀಗ ಅಪರಂಜಿಯ ಓದುಗರ ಗಮನಕ್ಕೇ ತರುತ್ತಿದ್ದೇನೆ. ಪದ್ಯಗಳು ಪ್ರತ್ಯೇಕವಾಗಿ ಅಚ್ಚಾಗಿವೆ.

ಆದವಾನಿಯಲ್ಲಿ ಶ್ರೀ ಜಿ. ಎಸ್ ಭಟ್ಟರು ನನ್ನ ಆತಿಥೇಯರು. ಅವರು ದ್ರೌಪದಿಯ ವರ್ಣನೆಯ ಎರಡು ಪದ್ಯಗಳ ಅರ್ಥದ ಬಗೆಗೆ ನನ್ನನ್ನು ಪ್ರಶ್ನಿಸಿದರು. ಶ್ರೀ ಕೃಷ್ಣಮೂರ್ತಿ ಎನ್ನುವ ಗಮಕಿಗಳು ಹೇಳಿದ ಅರ್ಥವನ್ನು ನನ್ನ ಗಮನಕ್ಕೇ ತಂದರು. ದಿ॥ ಗೊರೂರು ರಾಮಸ್ವಾಮಿ ಐಯಂಗಾರ್ಯರು ಈ ಪದ್ಯಗಳ ಬಗೆಗೆ ತಮ್ಮ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಕೀ. ರಂ. ನಾಗರಾಜರೂ ಇದರ ಬಗೆಗೆ ಬರೆಯಲು ನನಗೆ ತಿಳಿಸಿದ್ದಾರು. ('ವ್ಯಾಖ್ಯಾನ ವಿಹಾರ' ನೋಡಿ)

ಹೀಗಾಗಿ ಯಾತ್ರೆ, ಸತ್ಸಂಗ, ಹಾಗೂ ಸಾಹಿತ್ಯ ಚರ್ಚೆ ಈ ಬಾರಿಯ ಆದವಾನಿ ಪ್ರವಾಸದಲ್ಲಿ ನನಗೆ ದೊರೆಯಿತು.

ಸ್ಥಳ

ಗೆಳೆಯ,
ನಾ ಬರುವುದರೊಳಗೆ
ನಿನ್ನೀ ಹೃದಯದೊಳಗೆ
ಮನೆ ಮಾಡಿಹರು
ಮೂವರಾಗಲೇ
ನನಗೆಲ್ಲಿಹುದೋ ತಾಣ ?

ಓ ಜಾಣೆ,
ಅಲ್ಲಿಹುದು ನಾಲ್ಕು ಅಂಕಣ.

ಮುಂದಗೆರೆ ಸೋಮು.

11

ವ್ಯಾಖ್ಯಾನ ವಿಹಾರ

ಅ. ರಾ. ಸೇ.

ಕುಮಾರ ವ್ಯಾಸ ಭಾರತ ಸಭಾಪರ್ವ ಸಂಧಿ ೧೩ ಪದ್ಯ ೧೯

ರಾಜಸೂಯದ ಕರ್ತೃವೋಲ್ ಜಿತ
ರಾಜಮಂಡಲವಾಯ್ತು ಮುಖವಿದು
ರಾಜರಾಜನ ಪೋಲ್ದು ದಳಕಾವೇಷ್ಟಿತತ್ವದಲಿ
ರಾಜಸುದ್ಯಾನದ ವೊಲಾಸ್ಯಸ
ರೋಜವಾಯ್ತು ತಮಾಲಪತ್ರವಿ
ರಾಜಿತವು ಜನಮೇಜಯ ಕ್ಷಿತಿಪಾಲ ಕೇಳೆಂದ

ರಾಜಸೂಯಯಾಗದ ಕರ್ತೃವು ಎಲ್ಲ ರಾಜರನ್ನು ಗೆದ್ದಿರುತ್ತಾನೆ, ಅವನಂತೆ ದ್ರೌಪದಿಯ ಮುಖದ ಚೆಲುವು ಸ್ವಯಂವರ ಮಂಟಪದಲ್ಲಿದ್ದ ಎಲ್ಲ ರಾಜರನ್ನೂ ಗದ್ದಿತು. ರಾಜರಾಜನು (ಕುಬೇರ) ಅಳಕಾನಗರದಲ್ಲಿರುತ್ತಾನೆ, ದ್ರೌಪದಿಯ ಮುಖವು ಅವನಂತೆ ಅಳಕ (ಮುಗುರುಳು) ದಿಂದ ಶೋಭಿಸುತ್ತಿತ್ತು. ರಾಜನ ಉದ್ಯಾನವು ಹೊಂಗೆ (ತಮಾಲ) ಮರಗಳಿಂದ ವಿರಾಜಿಸುವಂತೆ ಅವಳ ಮುಖ ಕಮಲವು ಒಂದು ವಿಶೇಷವಿನ್ಯಾಸದ ತಿಲಕದಿಂದ (ತಮಾಲ) ರಾರಾಜಿಸುತ್ತಿತ್ತು.

ಜನಪಕೇಳುಪಲಾಲಿತಾಂಜನ
ವೆನೆ ಜಿತಾಕ್ಷ ವಿಪಕ್ಷವಾದವು
ವಿನುತ ಕರ್ಣ ಪ್ರಣಯಗಳು ವೃಷಸೇನ ವೈರದಲಿ
ಜನ ವಿಡಂಬನ ತಾರಕಾಮಂ
ಡನ ಕದರ್ಥಿತ ಕುಮುದವೆನೆಲೋ
ಚನ ಯುಗಳ ವೊಪ್ಪಿದವು ವರಪಾಂಚಾಲ ನಂದನೆಯ.

ದ್ರೌಪದಿಯ ಕಣ್ಣುಗಳು ಅಂಜನೆಯಿಂದ ಉಪಲಾಲಿತವಾದರೂ ಹನು-ಮಂತನಿಗೆ ವಿರೋಧವಾಗಿದ್ದವು. ಕರ್ಣನಿಗೆ ಪ್ರಿಯವಾಗಿದ್ದರೂ ಅವನ ಮಗ ವೃಷಸೇನನಿಗೆ ವೈರಿಗಳಾಗಿದ್ದವು. ಚಂದ್ರನನ್ನು ಅಲಕ್ಷಿಸಿದ ಕುಮುದಗಳಂತಿದ್ದವು.

ಹೇಗೆಂದರೆ ಅವಳು ಕಣ್ಣಿಗೆ ಕಾಡಿಗೆ ಹಚ್ಚಿದ್ದಳು, ಅವು ಬ್ರಹ್ಮಚಾರಿಗಳಿಗೆ ಮೋಹಕವಾಗಿದ್ದವು. ಹನುಮಂತನು ಬ್ರಹ್ಮಚಾರಿ. ಕರ್ಣಪ್ರಣಯಗಳು ಎಂದರೆ

ಕಣ್ಣುಗಳು ವೃಕ್ಷಸೇನ ಎಂದರೆ ನಂದಿಧ್ವಜನಾದ ಮದನ ಸಂಹಾರಿಯಾದ ಶಿವ. ದ್ರೌಪದಿಯು ಕಣ್ಣುಗಳುಮನ್ಮಥನ ಪರವಾಗಿದ್ದವು. ಅಥವಾ ವೃಕ್ಷಸೇನ ಎಂದರೆ ಭ್ರೂಮಧ್ಯ ಮೂಗಿನ ಕಂಬವು ಕಣ್ಣುಗಳು ಅತ್ತಕಡೆ ಬೆಳೆಯುದಂತೆ ಅಡ್ಡಿಯಾಗಿವೆ. ಆದುದರಿಂದ ಕಣ್ಣುಗಳು ವೃಕ್ಷಸೇನದ ಮೇಲಿನ ವೈರದಿಂದ ಕಿವಿಯಕಡೆ ಬೆಳೆದಿವೆ. (ದರಾಂದೋಲಿತ ದೀಘಾಂಕ್ಷೀ ಎನ್ನುವ ಶ್ರೀ ದೇವಿಯ ನಾಮವನ್ನು ಇಲ್ಲಿ ಸ್ಮರಿಸ ಬಹುದು).

ಅವಳನ್ನು ನೋಡಿ ಹಲ್ಲುಕಿರಿದು ಅವಹಾಸ್ಯ ಮಾಡಲೆಂದು ಯತ್ನಿಸಿದ ರಾಜರ ನಗೆಯನ್ನು ಕರಿಗುಡ್ಡೆ (ತಾರಕ) ಯಿಂದ ಕೂಡಿದ ಕಣ್ಣುಗಳ ಸೌಂದರ್ಯ ತಿರಸ್ಕರಿಸುತ್ತಿತ್ತು.

(ಒಂದು ಕೋರಿಕೆ, ದ್ರೌಪದಿಯ ವಸ್ತ್ರಾಪಹರಣ ಸಂದರ್ಭದಲ್ಲಿ, ತನ್ನನ್ನು ರಕ್ಷಿಸು ಎಂದು ಅವಳು ಶ್ರೀ ಕೃಷ್ಣನ್ನು ಪ್ರಾರ್ಥಿಸುವಾಗ "ರಕ್ಷಿಸಿದೆಯೋಗಿನಿಗೆ ಬೆದರಿದ ದಕ್ಷಸುತೆಯನು" ಎಂದು ಹೇಳುತ್ತಾಳೆ. ಈ ಸಂದರ್ಭದ ಹಿನ್ನೆಲೆಯನ್ನು ತಿಳಿದವರು ಬರೆದು ಕಳುಹಿಸಲು ಕೋರಿದೆ).

ಕಲ್ಲಿದೆ

ಪಾಗ: ಮೂಗಿನೊಳಗಿಂದ
ಹೊರದೆಗೆದಾಗ ಕಲ್ಲಹರಳು
ತಾಯಿ, ತಜ್ಞನ ಕೇಳಿದಳು
ತೆಗೆಯಲಾಗುವುದೇನು
ಎದೆಯೊಳಗಿರುವುದನು ?

ಕಂಡರಿಯಿರಿ, ಮಾಜಿ ಪ್ರೇಮಿಯನು
ಎಂದದ ವೈದ್ಯ, ಶುಭ ಕೋರಿದನು.

ಮುಂದಗೆರೆ ಸೋಮು.

13

ಪತ್ರಿಕಾ ಪ್ರಪಂಚ

ಕಂಭಂ ಕೃಷ್ಣಮೂರ್ತಿ

‘ಕೆಂಡ’ ಪತ್ರಿಕೆಯ ಸಂಪಾದಕ ಮೆಣಸಿನಕಾಯಿಯವರು ತಲೆಯ ಮೇಲೊಂದು ಐಸ್ ಬ್ಯಾಗಿಟ್ಟುಕೊಂಡು, ತಮ್ಮ ತಲೆ ಶೂಲೆಯನ್ನು ಹತ್ತಿಕ್ಕುವ ವ್ಯರ್ಥ ಪ್ರಯತ್ನ ನಡೆಸಿದ್ದರು. ಮುಂದಿದ್ದ ಮೇಜಿನ ಮೇಲೆ ಹರಡಿದ್ದ ಬೃಹತ್ ಪ್ರಮಾಣದ ಲೇಖನಗಳ ರಾಶಿ, ಸುತ್ತಲೂ ಗೋಡೆಗಾನಿಸಿದ್ದ ರ್ಯಾಕುಗಳಲ್ಲಿ ತುಂಬಿ ತುಳುಕುತ್ತಿದ್ದ ಗ್ರಂಥಗಳ ಕಂತೆ, ಕಸದ ಬುಟ್ಟಿಯಲ್ಲಿ ಪರ್ವತದಂತೆ ಬೆಳೆದು ಕುಳಿತಿದ್ದ ತಿರಸ್ಕೃತ ಲೇಖನಗಳ ಗುಡ್ಡೆ, ಇವುಗಳ ಮಧ್ಯೆ ಕಪ್ಪೆಯಂತೆ ಕುಳಿತು ಲೇಖನ ಅಧ್ಯಯನದಲ್ಲಿ ತೊಡಗಿದ್ದ ಸಂಪಾದಕರನ್ನು ಪತ್ತೆ ಹಚ್ಚುವುದೇ ಕಷ್ಟಕರವಾಗಿತ್ತು.

“ಸಾಹೇಬ್ರಾ ಇನ್ನೊಂದು ಅರ್ಧಪುಟದಷ್ಟು ಜಾಗ ಖಾಲಿ ಆಗದೆ, ಅರ್ಧ ತಾಸಿನೊಳಗೆ ಏನಾರ ಬರಕೊಡ್ರಿ ಮತ್ತ... ಎಂದು ಕಂಪೋಜಿಟರ್ ಕುಲಕರ್ಣಿ ದುಂಬಾಲು ಬಿದ್ದಾಗ ಮೆಣಸಿನಕಾಯಿಯವರಿಗೆ ತಲೆ ಚಚ್ಚಿಕೊಳ್ಳುವಂತಾಯ್ತು.

“ಏನಪಾ ಕುಲಕರ್ಣಿ ಲೇಖನಾಂತಂದ್ರೆ ಬದನೀಕಾಯಿ ವ್ಯಾಪಾರಾಂತ ಮಾಡಿಯೇನು. ಅದಕ ಯೋಚನಾ ಮಾಡಲಿಕ್ಕೆ ಬ್ಯಾಡೇನು. ಈ ವ್ಯಾಳೇಲಿ ಹೀಂಗ ಬಂದು ನನ್ನ ತಲೀ ಮ್ಯಾಲೆ ಕುಂತ್ರೆ ಹ್ಯಾಂಗಾಗ್ತದೆ ಹೇಳು” ಮೆಣಸಿನಕಾಯಿ ಖಾರವಾಗಿಯೇ ಹೇಳಿದರು.

“ಮತ್ತ ಹ್ಯಾಂಗ ಮಾಡೂದರಿ. ಖಾಲಿ ತಲೀನಾರ ಬಿಡಬಹುದು. ಖಾಲಿ ಹಾಳೆ ಹ್ಯಾಂಗ ಬಿಡಲಿಕ್ಕೆ ಬರ್ತದೆ ಹೇಳ್ರಿ. ಏನಾರ ಮಾಡ್ಲಿಕ್ಕೆ ಬೇಕಲ್ಲರಿ“ ಅವನ ಸಮಸ್ಯೆ ಅವನಿಗೆ.

ಪಡಬಾರದ ಕಷ್ಟಪಟ್ಟು, ಬಂದಿದ್ದ ಲೇಖನಗಳಲ್ಲಿ ಪತ್ರಿಕೆಯ ಘನತೆಗೆ ತಕ್ಕಂತಹ ಲೇಖನಗಳನ್ನು ಹೆಕ್ಕಿ, ತಿದ್ದಿ, ರೂಪಿಸಿ, ಅವನ್ನು ಮುದ್ರಿಸಲು ಕೊಟ್ಟು ಕಳುಹಿಸಿಯಾಗಿತ್ತು. ಇನ್ನೆಲ್ಲಿದೆ ಅರ್ಜಂಟಿಗೆ ಲೇಖನ. ತಮ್ಮ ತಲೆ ಶೂಲೆಯಲ್ಲಿ ಅರ್ಧಪುಟದಷ್ಟು ತೂಕವಾದ ಲೇಖನ ಹೊಸೆದು ಕೊಡಲು ತಕ್ಷಣದಲ್ಲಿ ಸಾಧ್ಯವೆ?

“ನನ್ನ ಮುಂದೇಲಿ ತುಂಬಿದ್ದ ಸರಕುಗಳೆಲ್ಲಾ ಖಾಲಿ ಆತವ ಕುಲಕರ್ಣಿ, ಇನ್ನು ನಿನ್ನ ತಲೀನಾಗೆ ಏನಾರ ಉಳಿದಿದ್ರೆ ಅದನ್ನೇ ಅರ್ಧ ಪುಟದಷ್ಟು ತುಂಬಿಕೊ ನನ್ನ ಕಾಡಬ್ಯಾಡ” ಎಂದು ನಿಸೂರಾಗಿ ಹೇಳಿ, ಕಣ್ಣು ಮುಚ್ಚಿ ಕುಳಿತರು ಸಂಪಾದಕರು.

ಸಂಪೋಸಿಟರ್ ಕುಲಕರ್ಣಿ ತನ್ನ ಸೋಡಾಗ್ಲಾಸಿನ ಚಷ್ಮದ ದಿಟ್ಟಿಯನ್ನು ಸಂಪಾದಕರ ಕೋಣೆಯ ಸುತ್ತಲೂ ಹಾಯಿಸಿದ. ಕಸದ ಬುಟ್ಟಿಯಲ್ಲಿ ಬಿದ್ದಿದ್ದ ಬಿದ್ದಿದ್ದ ಲೇಖನ ಮಾಲೆಯೇ ಅವನ ಕಣ್ಣಿಗೆ ಬಿತ್ತು. ಬುಟ್ಟಿಯನ್ನು ಗೂರಾಡಿ. ಅರ್ಧಪುಟಕ್ಕೆ ಸರಿ ಹೊಂದುವ ಕವಿತೆಯೊಂದನ್ನು ಹೆಕ್ಕಿಕೊಂಡು ತನ್ನ ಕೊಠಡಿಗೆ ಓಡಿದ.

"ಅವಳು ಓಡಿದಳು ನಾನೂ ಓಡಿದೆ
ಮರಸುತ್ತಿದಳು ನಾನು ಸುತ್ತಿದೆ
ಕುಣಿದಳು, ಹಾಡಿದಳು ನಾನೂ ಹಾಗೆ ಮಾಡಿದೆ
ಪ್ರೇಮ ತುಂಬಿ ಬಂತು ನನಗೆ ಎಂದಳು,
ನೀನೇ ದೀಪ ನನ್ನ ಬಾಳಿಗೆ ನಾನೆಂದೆ"
ಬರೆದವರು ಕವಿ. ಕೆಂಚಪ್ಪ

ಮೇಲಿನ ಕವನ ಪತ್ರಿಕೆಯಲ್ಲಿ ಪ್ರಕಟವಾಗಿಯೇ ಹೋಯಿತು. ಲೇಖನ ಮೌಲ್ಯಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದ ಮೆಣಶಿನಕಾಯಿಯವರು ಈ ಬಾಲಿಶ ಕವನವನ್ನು ಓದಿ ಎದೆ ಬಡಿದುಕೊಂಡರು.

"ಕವಿ ಕೆಂಚಪ್ಪನವರ ಕವನ ನಮ್ಮನ್ನು ರಂಜಿಸಿತು. ನಮ್ಮ ಬಾಳಿಗೆ ದಾರಿ ದೀಪವಾಯಿತು. ಕವನ ಅರ್ಥಪೂರ್ಣವಾಗಿತ್ತು. ಕೆಂಚಪ್ಪನವರ ಕವನಗಳು ಇನ್ನೂ ಹೆಚ್ಚು ಹೆಚ್ಚಾಗಿ ಪ್ರಕಟಗೊಳ್ಳಲಿ" ಹೀಗೆ ನಾನಾ ತರಹ ಅಭಿಪ್ರಾಯ ದಿಂದೊಳಗೊಂಡ ನೂರಾರು ವಾಚಕರ ಪತ್ರಗಳನ್ನು ಓದಿ, ಮೆಣಶಿನಕಾಯಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಪ್ರೌಢಲೇಖನಗಳು, ಅಮೂಲ್ಯ ಸಮ ಕಾಲೀನ ಸಂಪಾದಕೀಯ ಹೆಸರಾಂತ ಕವಿ ದಿಗ್ಗಜರಿಂದ ರಚಿತವಾದ ಮೌಲ್ಯಭರಿತ ಕವಿತೆಗಳು, ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತಿದ್ದಾಗ್ಯೂ. ಇದುವರೆವಿಗೆ ಒಬ್ಬ ವಾಚಕರೂ ಪ್ರತಿಕ್ರಿಯೆ ವ್ಯಕ್ತಪಡಿಸಿರಲಿಲ್ಲ. ಆದರೆ ತಾವು ಕಸದ ಬುಟ್ಟಿಗೆ ತಳ್ಳಿದ ಈ ಲೇಖನ ಕ್ಲಿಕ್ಕಾಗಿದ್ದು ಕಂಡು ಅವರಿಗೆ ಚೋದ್ಯವೆನಿಸಿತು.

"ಮುಂದಿಗೆ ಯಾವ ಸಾಹಿತ್ಯ ಜೇಕಂಬೋದೆ ನನ್ನ ತಿಳುವಳಿಕೆಗೆ ಬರುವಲ್ಲದಲ್ಲ" ಎಂದು ಅವರು ವೇಚಾಡಿಕೊಂಡರು.

ಕುಲಕರ್ಣಿ ಮಹಾ ವ್ಯವಹಾರ ಚತುರ. 'ಕಸದ ಬುಟ್ಟಿ' ಎಂದು ನಾಮ ಕರಣಗೊಂಡ ವಾರ ಪತ್ರಿಕೆಯನ್ನು ಪ್ರಾರಂಭಿಸಿಯೇ ಬಿಟ್ಟ. ಅದಕ್ಕೆ ಅವನೇ ಸಂಪಾದಕ, ಪ್ರಕಾಶಕ ಸರ್ವವೂ ಅವನೇ ಆದ. ಮೆಣಶಿನಕಾಯಿಯವರು ಕಸದ ಬುಟ್ಟಿಗೆ ಎಸೆಯುತ್ತಿದ್ದ ಲೇಖನಗಳನ್ನೆಲ್ಲಾ ಕಿಲೋ ಲೆಕ್ಕದಲ್ಲಿ ತೂಕ ಮಾಡಿ ಕೊಂಡು ಕೊಂಡು ಅದನ್ನು ತನ್ನ 'ಕಸದ ಬುಟ್ಟಿ' ವಾರ ಪತ್ರಿಕೆಯಲ್ಲಿ ಅಚ್ಚು ಹಾಕಿಸಿದ.

ಪತ್ರಿಕೆಯ ಪ್ರಸಾರ ವಾರ ವಾರಕ್ಕೂ ಬಡಕಾಯಿಸಿ, ಮೂಲ ಪತ್ರಿಕೆಯಾದ 'ಕೆಂಡ' ಪತ್ರಿಕೆಯನ್ನು ಪ್ರಸಾರದಲ್ಲಿ ಹಿಂದಕ್ಕೆ ತಳ್ಳಿತು. ಕುಲಕರ್ಣಿ ಸ್ವಂತ ಮುದ್ರಣಾಲಯ ಮಾಡಿಕೊಂಡ. ಸ್ವಂತ ಮನೆ ಕಟ್ಟಿಸಿದ. ಕಾರನ್ನೂ ಕೊಂಡುಕೊಂಡ. 'ಕೆಂಡ' ಪತ್ರಿಕೆಯ ಕಂಪೋಜಿಟರ್ ಉದ್ಯೋಗಕ್ಕೆ ರಾಜೀನಾಮೆಯನ್ನೂ ಸಲ್ಲಿಸಿದ.

'ಕಸದ ಬುಟ್ಟಿಯ' ಸ್ಪರ್ಧೆಯಿಂದಾಗಿ ವಾರಪತ್ರಿಕೆ 'ಕೆಂಡ' ಪ್ರಸಾರವನ್ನು ಕಳೆದುಕೊಂಡು, ಅದರ ಪ್ರಕಟಣೆಯನ್ನು ನಿಲ್ಲಿಸುವ ಹಂತಕ್ಕೆ ಬಂದಿಳಿಯಿತು.

"ಮೌಲ್ಯ, ಘನತೆ ಅಂತೆಲ್ಲಾ ಬಡ್ಕೊಂಡ್ರಿ ಈಗ ಏನಾತು ? ಪತ್ರಿಕಾ ಸ್ಥಿತಿ ಹೀಂಗಾತಲ್ಲ" ಎಂದು ಕೆಂಡ ಪತ್ರಿಕೆಯ ವ್ಯವಸ್ಥಾಪಕ ಉಳ್ಳಾಗಡ್ಡಿಯವರು ಮೆಣಸಿನಕಾಯಿಯವರ ಮೇಲೆ ಹಾರಾಡಿದರು.

"ಮೌಲ್ಯವಿಲ್ಲದ ಲೇಖನಾ ಹಾಕಿದ್ರೆ ಪತ್ರಿಕಾ ಘನತೆಗೆ ಚ್ಯುತಿ ಬರ್ತದಲ್ಲಾ ಸಾಹೇಬರೇ" ಎಂದು ಸಂಪಾದಕರು ಉತ್ತರಿಸಿದಾಗ ವ್ಯವಸ್ಥಾಪಕರಿಗೆ ಮೈ ಪರಚಿಕೊಳ್ಳುವಂತಾಯ್ತು.


"ಗೌರವ ಘನತೆ ಯಾರಿಗೆ ಬೇಕ್ರಿ. ಪತ್ರಿಕಾ ಬದುಕಿದ್ರೆ ನಾವೂ ನೀವೂ ಎಲ್ಲಾ ಕೂಳು ತಿನ್ನಲಿಕ್ಕೆ ಬರ್ತದೆ. ಕಂಪೋಜಿಟರ್ ಕುಲಕರ್ಣಿ ಹಾಳೂ ಮೂಳು ಪ್ರಕಟಣಾ ಮಾಡಿ ಕಾರು ಕೊಂಡುಕೊಂಡ. ಇದ್ದಿದ್ದ ಕಾರನ್ನು ಮಾರುವ ಪರಿಸ್ಥಿತಿ ನಂದಾತು" ಎಂದು ಉಳ್ಳಾಗಡ್ಡಿಯವರು ಹಲುಬಿದಾಗ, ವ್ಯವಹಾರ ಚತುರತೆಯಿಲ್ಲದೆ ಕೇವಲ ಪಾಂಡಿತ್ಯವನ್ನೇ ತಲೆಯಲ್ಲಿ ತುಂಬಿಕೊಂಡಿದ್ದ ಮೆಣಸಿನಕಾಯಿಯವರು. ಅರಪಾವು ಹರಳೆಣ್ಣೆ ಕುಡಿದವರಂತೆ ಕಂಡರು.

ವಾರಪತ್ರಿಕೆ "ಕೆಂಡ" ಪತ್ರಿಕೆಯ ಪ್ರಕಟಣೆ ನಿಂತಮೇಲೆ ಮೆಣಸಿನಕಾಯಿಯವರು 'ಕಸದ ಬುಟ್ಟಿ'ಗೆ ಸೇರಿಕೊಂಡರು. ಪ್ರಕಟಣೆಗೆ ಬಂದ ಲೇಖನಗಳನ್ನೆಲ್ಲಾ ಓದಿ, ಮೌಲ್ಯವಿರುವ ಲೇಖನಗಳನ್ನು ಒಂದು ಬದಿಗೆ ಇರಿಸಿ, ಮಿಕ್ಕ ಲೇಖನಗಳನ್ನು ಕಸದ ಬುಟ್ಟಿಗೆ ಎಸೆಯುವುದು, ಇದೇ ಮೆಣಸಿನಕಾಯಿಯವರ ಇತ್ತೀಚಿನ ಉದ್ಯೋಗ. ಕಸದ ಗೂಡೆಯಲ್ಲಿ ತುಂಬಿದ ಲೇಖನಗಳು 'ಕಸದ ಬುಟ್ಟಿ' ಪತ್ರಿಕೆಯಲ್ಲಿ ಪ್ರಕಟಗೊಂಡರೆ, ಮೌಲ್ಯವಿರುವ ಲೇಖನಗಳು, ರದ್ದಿ ಪೇಪರಿನಂತೆ ಮಾರಾಟಗೊಂಡು, ಉಭಯತಾಪ ಹಣಗಳಿಸಿ, ಈಗ ಕಂಪೋಜಿಟರ್ ಕುಲಕರ್ಣಿ ಭದ್ರಕುಳವಾಗಿದ್ದಾನೆ.

ನಕ್ಕಾಂವಾ ಗೆದ್ದಾಂವಾ

ಸ್ಫೋಟ ಮೀಮಾಂಸೆ

ಶೀನೊ



ನಲ್ಲೆ,

ಇನ್ನ ಮ್ಯಾಲೆ ನಾ ನಿನ್ನ

ಒಲ್ಲೆ

ನಲ್ಲ
ಇಷ್ಟೆಲ್ಲ ಆದ ಮ್ಯಾಲೆ
ಇದು ನಿನಗೆ
ಸಲ್ಲ

ಆದನೆಲ್ಲ ನಾ ಬಲ್ಲೆ
ನಲ್ಲೆ
ಆದರೂ ಇನ್ನ ಮ್ಯಾಲೆ
ನಾ ನಿನ್ನ
ಒಲ್ಲೆ

ನಲ್ಲ
ಕೇಳಿನಲ್ಲವೇ
ಈ ಕಂದನಾ ಸೊಲ್ಲ
ಇನ್ನಿದು ನಿನಗೆ
ತರವಲ್ಲ

ಅಲ್ಲೆ,

ಮೊದಲೆ ಬಡಕೊಂಡಿದ್ದೆನಲ್ಲೆ,
ಆಗೆಲ್ಲ,
'I will take care of
my self'
ಎಂದು ಕೊಚ್ಚಿದ್ದೆಯಲ್ಲೆ ?

ಅಪುದಪುದು ನಲ್ಲ
ಅಂದಿದ್ದು ಸುಳ್ಳಲ್ಲ
ಆದರೆ
ನಕಲೀ ಮಾಲಿಗೆ
ಮೋಸ ಹೋದೆನಲ್ಲ

ಸರಿ ಹೋಯ್ತು
ನಿನ್ನ ಮೋಸಕ್ಕೆ ತಕ್ಕ ಮೋಸ
ಮನೆ ಹಾಳು ಮುಂಡೆ
ಎನ್ನ ಬ್ರಹ್ಮ ಪದವಿಯ ಕಸಿದು
ನೀನೇನು ಕಂಡೆ

ಥೂ

ನಿಲ್ಲು ಅಲ್ಲೆ
ಕೊಡುವೆನಿದೋ
ನಿನ್ನ ಪಾಪಕ್ಕೆ ತಕ್ಕ ಶಾಪ

"ನಿನ್ನ ಅನೌರಸ ಸಂತತಿ
ಭಾರತೀಯರಿಗೆ
ಆಗುತ್ತಲೇ ಇರಲಿ
ನಿರಂತರ ಹೆರಿಗೆ"

ಟ್ರೈನಿಂಗ್ - ಟ್ರೈನಿಂಗ್

ಸುಶೀಲಾ ಸೂರ್ಯನಾರಾಯಣ

ಸೀತಾರಾಮು ಆಫೀಸಿನಿಂದ ಸಂಭ್ರಮದಿಂದಲೇ ಮನೆಗೆ ಬಂದ. ಮುಂದಿನ ಬಾಗಿಲು ತೆಗೆದೇ ಇದ್ದದ್ದು ಅವನ ಸಂಭ್ರಮ ಇನ್ನಷ್ಟು ಹೆಚ್ಚಿತು. ತೆರೆದಿದ್ದ ಬಾಗಿಲನ್ನು ಇನ್ನಷ್ಟು ತಳ್ಳುತ್ತ "ಲೇ ಕಮ್ಮೂ– ಎಂದು ಕೂಗುತ್ತ ಒಳಬಂದ. "ಹೆಸರನ್ನು ನೆಟ್ಟಗೆ ಕೂಗಿ ಅಂತ ಎಷ್ಟು ಸಲ ಹೇಳಿದೀನಿ" ಸಿಡುಗುಟ್ಟುತ್ತಲೇ ಹೊರ ಬಂದಳು ಮಡದಿ. "ನಿಂಗೆ ನಿಮ್ಮಮ್ಮ ಕಮಲೀಂತ ಕರದ್ರೆ ಬಹು ಚೆನ್ನಾ ಏನೋ... ಅದಿರ್ಲಿ ಒಂದು ವಿಶೇಷ ಸುದ್ದಿ ಏನಿರ್ಬಹುದು ಹೇಳು...ಬಿಡು ನಿಂಗೆಲ್ಲಿ ಹೊಳೆಯುತ್ತೆ. ನಂಗೆ ದಿಲ್ಲಿಗೆ ಟ್ರೈನಿಂಗಿಗೆ ಹಾಕಿದ್ದಾರೆ ಕಣೇ" ಎಂದ. "ಹೌದೇನ್ರಿ... ಇವತ್ತು ಎರಡೆರಡು ಒಳ್ಳೆ ಸುದ್ದಿ. ನನ್ನ ತಂಗಿ ವಿಮಲಂಗೆ ಮದ್ವೆ ನಿಶ್ಚಯ ಆಯ್ತಂತೆ. ಅಪ್ಪನ ಕಾಗ್ದ ಬಂದಿದೆ. ಅದ್ಸರಿ ದಿಲ್ಲಿಗೆ ಯಾವಾಗ ಹೋಗ್ಬೇಕು" ಸಂಭ್ರಮದಿಂದಲೇ ಕೇಳಿದಳು. ಇವರ ಮದ್ವೆ ಆಗಿ ಎರಡು ವರ್ಷದಿಂದ ಕಮಲೂಗೆ ದಿಲ್ಲಿ ನೋಡುವ ಬಯಕೆ.

"ಟ್ರೈನಿಂಗ್ ಹಾಕಿಸ್ಕೊಳ್ರೀ. ನಿಮ್ಮ ಆಫೀಸಿನಲ್ಲಿ ಎಷ್ಟು ಜನ ಹೋಗಿ ಬಂದಿದಾರೆ. ನೀವು ಹೋದ್ರೆ ನಾನೂ ಬಂದ್ಬಿಡ್ತೀನಿ. ಸ್ವಾಮಿಕಾರ್ಯ ಸ್ವಕಾರ್ಯ ಎರಡೂ ಆಗತ್ತೆ' ಎಂದು ಕಮಲು ಆಸೆಪಟ್ಟಾಗ "ಕೆಲ್ಸ ಗೊತ್ತಿಲ್ದೆ ಇರೋರ್ಗೆ ಟ್ರೈನಿಂಗ್ ಕಣೆ ನನ್ನನ್ನ ಯಾಕೆ ಹಾಕ್ತಾರೆ" ಎಂದು ಕಾಲರ್ ಹಿಡಿದೆತ್ತಿ ಭುಜ ಕುಣಿಸುತಿದ್ದ "ಅದೂ ಅಲ್ದೆ ಟ್ರೈನಿಂಗ್ ಅಂದ್ರೆ ಮಕ್ಕಳ ಸ್ಕೂಲ್ ತರ ದಿನಪೂರ್ತಿ ಪಾಠನೇ" ಎನ್ನುತ್ತಿದ್ದ. "ಅಯ್ಯೋ–ನಂಗೊತಿಲ್ವ ನೆಪಕ್ಕೆ ಟ್ರೈನಿಂಗ್ ಅಂತ ಹೋಗಿ ಹೆಂಡತಿ ಮಕ್ಕಳ ಜೊತೆ ಸುತ್ತ ಮುತ್ತ ಎಲ್ಲಾ ಸುತ್ತಾಡಿ ಬಂದಿದಾರೆ ಎಲ್ಲಾರೂ" ಹೆಂಡತಿ ಮಾತಿಗೆ ಏನು ಹೇಳ್ಬೇಕು ಅವನು ? ಹೆಂಡತಿ ಆಸೆಗೆ ಕಟ್ಟುಬಿದ್ದು ವರ್ಷದಿಂದ ಟ್ರೈನಿಂಗ್ ಹಾಕಿಸ್ಕೊಳೋಕೆ ಪ್ರಯತ್ನ ಮಾಡೇ ಮಾಡ್ದ. ಅಂತೂ ಈಗ ಒಂತು ಸುಸಂಧಿ. ಇನ್ನು ಹದಿನೈದು ದಿನಕ್ಕೆ ಹೊರಡಬೇಕು. ಶುರು ಆಗೇ ಹೋಯ್ತು ಅವರ ಪ್ರವಾಸದ ತಯಾರಿ. ಸೀತಾರಾಮು ರಿಸರ್ವೇಶನ್ನು, ಟ್ರಾವೆಲರ್ಸ್ ಚೆಕ್ಕು ಅಂತ ಓಡಾಡಿದರೆ ಕಮಲೂದು ಮಿಕ್ಕ ತಯಾರಿ ತಿಂಡಿ

ಬಟ್ಟೇನು "ಲಗೇಜು' ಕಡಿಮೆ ಇರಲಿ" ಇವನೆಂದರೆ "ಅಲ್ಲಿ ದಿನ ನಿತ್ಯ ಬಟ್ಟೆ ಒಗ್ಯೋಳೋಕೆ ಆಗತ್ತೋ ಇಲ್ವೋ ಎರಡು ಜೊತೆ ಬಟ್ಟೆ ಜಾಸ್ತೀನೇ ಇರಲಿ ಎಂದು ಸೂಟ್‌ಕೇಸ್ ತುಂಬಿಸಿದಳು 'ದಿಂಬು ಹೊದ್ಗೆ ಸರಿ ಇಲ್ದಿದ್ರೆ ನಂಗೆ ಸರ್ಯಾಗಿ ನಿದ್ದೇನೆ ಬರಲಪ್ಪ ಎಂದು ಹೋಲ್ಡಾಲನ್ನೂ ಊದಿಸಿದಳು.

'ನೋಡ್ರೀ ಹಾಗೇ ಕಾಶಿಗೆ ಹೋಗಿ ನಾಲ್ಕೈದು ಬನಾರಸ್ ಸೀರೆ ತರಣ್ಣ ಇನ್ನೇನು ಮದ್ವೆ ಬಂತಲ್ಲ' ಎಂದಾಗ.

'ನಾಲ್ಕೈದು ಯಾಕೆ ?' ಸೀತಾರಾಮು ಕಕ್ಕಾಬಿಕ್ಕಿಯಾದ.

'ಅಮ್ಮ, ವಿಮಲ ನಾನು ಬೀಗಿತ್ತಿ.... ನಿಮಗೇನು ಗೊತ್ತಾಗತ್ತೆ ?"

'ಅಷ್ಟಕ್ಕೆ ಎಷ್ಟಾಗತ್ತೆ ದುಡ್ಡು ನಿಂಗೇನಾದ್ರೂ ಅಂದಾಜಿದ್ಯಾ

ನಮ್ಮಪ್ಪ ಏನು ನಿಮ್ಮ ನಾವ ಇಟ್ಕೊಳಲ್ಲರೀ" ಮೂತಿ ತಿರುವುತ್ತ ಹೇಳಿದಳು ಕಮಲು ಸೀತಾರಾಮು ನಿಟ್ಟುಸಿರು ಬಿಟ್ಟು ಮಂಕಾಗಿ ಕುಳಿತ. ಯಾವ ಘಳಿಗೆಯಲ್ಲಿ ಕಮಲು ಸೀರೆಗಳ ಬೇಡಿಕೆ ಮುಂದಿಟ್ಟಳೋ ಗೆಳೆಯರು, ಸಹೋದ್ಯೋಗಿಗಳು ತಮ್ಮ ಬೇಡಿಕೆಗಳನ್ನು ಇವನ ಮುಂದಿಟ್ಟು ದುಂಬಾಲು ಬಿದ್ದರು.

"ಏನ್ರಿ ಸೀತಾರಾಮು ದಿಲ್ಲಿಗೆ ಹೊರಟಿದ್ದೀರಂತೆ. ನಿಮಗೆ ತೊಂದರೆ ಆಗ ಲ್ಲಾಂದ್ರೆ ನಂಗೆರಡು ಮೋಡ ತರ್ತೀರ ? ಇಲ್ಲಿ ಅದಕ್ಕೆ ತುಂಬಾ ದುಡ್ಡು ನನ್ಹೆಂಡ್ತೀಗೆ ಅದೇನೋ ಮೋಡ ಅಂದ್ರೆ ಪ್ರಾಣ" ಸದಾನಂದನ ಬೇಡಿಕೆಗೆ ಇವನ ಉಸಿರು ಕಟ್ಟಿತು.

"ಮಿ. ಸೀತಾರಾಮ್ ನನ್ಗೇನೂ ಬೇಡರೀ. ಆದರೆ ನನ್ನ ಮಗಳಿಗೆ ಒಂದಷ್ಟು ರೆಡಿಮೇಡ್ ಡ್ರೆಸಸ್ ತಂದುಬಿಡಿ. ಸೈಜು 22 ಕರೋಲ್‌ಬಾಗ್‌ನಲ್ಲಿ ಬೆಲೆ ತುಂಬಾ ಕಡಿಮೆಯಂತೆ. ಇದು ನೂರು ರೂಪಾಯಿ ಇಟ್ಕೊಳ್ಳಿ. ಒಂದ್ನಾಲ್ಕು ಸೆಟ್ ತಂದ್ರೆ ನಾಕು. ಮಿಕ್ಕಿದ್ದು ಆಮೇಲೆ ಕೊಡ್ತೀನಿ" ಟೈಪಿಸ್ಟ್ ವನಜಳ ಸಣ್ಣ ಕೋರಿಕೆ ಇದು. ಸೀತಾರಾಮುವಿಗೆ ಒಳಗೊಳಗೇ ಕುದಿಯುವ ಹಾಗಾದರೂ ತಣ್ಣಗೆ ತಲೆ ಆಡಿಸಿದ.

"ಏನಪ್ಪ ಸೀತಾರಾಮು, ನೀನು ಬರ್‍ವಾಗ ನನ್ಗೊಂದು ನನ್ನಾಕೆಗೊಂದು ಸ್ವೆಟರ್ ತಂದ್ಬಿಡಪ್ಪ. ನಂಗೆ ನೀಲಿ ಬಣ್ಣ ಇರ್ಲಿ. ಆಕೆಗೆ ಯಾವ್ದಾದ್ರೂ ಲೈಟ್

ಕಲರ್ ಬೇಕಂತೆ. ನಂಗೆ ಕ್ಲೋಸ್ಡ್ ನೆಕ್ ಇರ್ಲಿ ಅವ್ರಿಗೆ ರೌಂಡ್ ನೆಕ್ಕು ಮುಂಭಾಗ ಗುಂಡಿ ಅಂತೆ ಸೈಜ್ ನಿಂಗೇ ಗೊತ್ತಾಗತ್ತಲ್ಲ" ಹಿರಿಯರೊಬ್ಬರ ಕೋರಿಕೆಗೆ ಇಲ್ಲವೆನ್ನಲು ಬಾಯೇ ಬರಲಿಲ್ಲ.

"ಯಾವಾಗ್ಲೂ ಇದೇ ಜಾಯಮಾನ ಆಗ್ಹೋಯ್ತು ನಿಮ್ದು ದಾಕ್ಷಿಣ್ಯಕ್ಕೆ ಕಟ್ಟುಬೀಳ್ತೀರ" ಎಂದು ಮೂದಲಿಸಿದ ಕಮಲೂಗೇ ಮರುದಿನ ಗಂಡನ ಆಫೀಸಿನ ಸರೋಜದೇವಿ ಬಂದು "ಮ್ಯಾಡಂ ನನ್ನದೊಂದು ಸ್ಪೆಷಲ್ ರಿಕ್ವೆಸ್ಟ್. ನಿಮ್ಮವರ ಹತ್ರ ಹೇಳೋಕೆ ಸಂಕೋಚ ಆಯ್ತು, ಎಂದು ಸಂಕೋಚ ಪಟ್ಟಾಗ 'ಹೇಳಿ ಪರ್‍ವಾಗಿಲ್ಲ' ಎಂದಳು ಕಮಲು ದಿಲ್ಲಿ ಪಾಲಿಕಾ ಬಜಾರ್‌ನಲ್ಲಿ ಚಪ್ಪಲಿಗಳ ರಾಶಿರಾಶಿನೇ ಹಾಕಿರ್‍ತಾರಂತೆ. ನಂಗೆ ಚಪ್ಪಲಿಗಳು ಅಂದ್ರೆ ಒಂದು ತರ ಹುಚ್ಚು ನೋಡಿ. ಒಂದು ಮೂರ್‍ನಾಲ್ಕು ಜೊತೆ ತಂದ್ಕೊಡ್ತೀರ ದಯವಿಟ್ಟು.... ಆದರೆ ಒಂದು ಎಚ್ಚರಿಕೆ ಇರ್‍ಬೇಕು ನೋಡಿ, ಆ ರಾಶೀಲಿ ಸರಿಯಾದ ಜೋಡಿ ಆರಿಸ್ಬೇಕು. ಹೋದ ಸಲ ಯಾರೋ ತಂದ್ಕೊಟ್ಟೋರು, ಒಂದು ಇಜ್ಜೋಡು. ಇನ್ನೊಂದು ಒಂದೇ ಕಾಲಿಂದೇ ಎರಡೂ ಚಪ್ಪಲಿ ತಂದ್ಬಿಟ್ಟಿದ್ರು, ಎರಡು ಜೊತೇನೂ ಎಸೀಬೇಕಾಯ್ತು ಅದಕ್ಕೇ ಹೇಳ್ದೆ.... ನನ್ನ ನಂಬರು ಏಳು" ಎಂದು ಬೇಡಿಕೆ ಒಪ್ಪಿಸಿದಾಗ ಕಮಲು ಕೋಲೆ ಬಸವನಂತೆ ತಲೆ ಆಡಿಸಿದಳು.

"ನನ್ನನ್ನ ಹಾಸ್ಯ ಮಾಡ್ದೆ ನೀನು ಈಗ ಅದೇ ಮಾಡ್ದೆ. ಸೀತಾರಾಮು ಅಂದ್ಬಿದ್ದಕ್ಕೆ.

'ಛೆ ಮನೆ ಬಾಗಿಲಿಗೆ ಬಂದು ಹೆಣ್ಣು ಹುಡ್ಗಿ ಕೇಳಿದ್ರೆ ಇಲ್ಲ ಅನ್ನೋದಾ',... ಕಮಲು ಸಮರ್ಥಿಸಿಕೊಂಡಳು.

ಅಕ್ಕ ಪಕ್ಕದ ಮನೆ ಮಕ್ಕಳು ಬಂದು,

"ಅಂಕಲ್ ಅಂಕಲ್ ದಿಲ್ಲೀಲಿ ಸ್ಪೋರ್ಟ್ಸ್ ಸಾಮಾನು ತುಂಬಾ ಚೀಪಂತೆ. ಅವತ್ತಿಂದ ನಮ್ಮ ಡ್ಯಾಡಿ ಹೇಳ್ತಿದ್ರು ಯಾರಾದ್ರು ದಿಲ್ಲೀಗೆ ಹೋದ್ರೆ ತರ್‍ಸಣ್ಣಾಂತ, ನಮಗೊಂದು ಫುಟ್‌ಬಾಲು ಕ್ರಿಕೆಟ್ ಸೆಟ್ ತಂದ್ಕೊಡ್ತೀರ ಅಂಕಲ್ ಪ್ಲೀಸ್' ಎಂದು ಬೇಡಿದಾಗ ಇವನಿಗೆ ಮಕ್ಕಳ ಆಸೆಗೆ ತಣ್ಣೀರೆರಚಲಾಗಲಿಲ್ಲ. ಹೊರಡೋದು ಇನ್ನೆರಡು ದಿನ ಉಳಿದಾಗ ಸೀತಾರಾಮುವಿನ ಬಾಲ್ಯ ಗೆಳೆಯ ವಿಶ್ವನಾಥ ಎಲ್ಲೋ ಟೂರ್ ಹೋಗಿದ್ದವನು ದಿಢೀರ್ ಬಂದಿಳಿದ. ಇವರ ತಯಾರಿ ನೋಡಿ,

'ಓ....ದಿಲ್ಲೀಗೆ ಹೋಗ್ತಾ ಇದ್ದೀರ....ಹಾಗಾದ್ರೆ' ಎಂದು ಏನೋ ಹೇಳೋವ್ನೊಳಗೆ ಸಾಕು ನಿಲ್ಸು ಮಾರಾಯ ಮುಂದೆ ಹೇಳ್ಬೇಡ' ಎಂದು ಕೈ ಮುಗಿದು ಗೋಗರೆದ. ಅಲ್ಲ ಕಣೋ" ಮತ್ತೆ ವಿಶ್ವ ಬಾಯಿ ತೆಗೆಯುತ್ತಿದ್ದಂತೆ 'ನಂಗೆ ಗೊತ್ತು....ನೀನೂ ಅಲ್ಲಿಂದ ಏನೋ ತರಕ್ಕೆ ಹೇಳ್ತೀಯಾನೆ....ನೋಡು ನೀನು ಬಾಲ್ಯ ಗೆಳೆಯ ಅಂತ ಮುಚ್ಚುಮರೆ ಇಲ್ದ ಹೇಳ್ತೀನಿ. ಈಗಾಗಲೇ ಇದರ ಪಟ್ಟಿ ಮಾರುದ್ದ ಆಗಿದೆ" ಎಂದಾಗ ವಿಶ್ವನಾಥ ಇವನ ಬೆನ್ನ ಮೇಲೆ ಧಪ್ಪೆಂದು ಗುದ್ದಿ 'ಏ ಕಮಂಗಿ ನಾನು ಹೇಳೋದು ಪೂರ್ತಿ ಕೇಳು ನನ್ನ ತಂಗಿ ಶೋಭ ಈಗ ದಿಲ್ಲೀಲೇ ಇದಾಳೆ. ಅಡ್ರೆಸ್ ಕೊಡ್ತೀನಿ ಹೋಗಿ. ನೀವು ಅಲ್ಲೂ ಇರಬಹುದು ನಾನೂ ಕಾಗ್ದ ಬರೀತೀನಿ' ಎಂದಾಗ ಹೋದ ಉಸಿರು ಬಂದಂತಾಯ್ತು ಸೀತಾರಾಮುಗೆ. ಮತ್ತೊಬ್ಬರಿಗಾಗಿ ಇವರು ತರಬೇಕಿದ್ದ ಸಾಮಾನಿನ ಪಟ್ಟಿ ನೋಡಿ ಲೊಚಗುಟ್ಟುತ್ತ "ಹೇಳೋರ್ಗೇನಾಗ್ಬೇಕು. ಅಲ್ಲಿ ಸುತ್ತಾಡಿ ಹೊತ್ಕೊಂಡು ತರೋ ಕಷ್ಟ ಅವರ್ಗೇನ್ಗೊತ್ತು. ಒಂದು ಉಪಾಯ ಹೇಳ್ತೀನಿ ಕೇಳು. ದಿಲ್ಲೀಲಿ ಅಲ್ಲಿ ಇಲ್ಲಿ ಸುತ್ತಾಡುವಾಗ ಬೀದಿಲಿ ಬಿದ್ದಿರತ್ತಲ್ಲ. ಅಲ್ಲಿಯ ದೊಡ್ಡದೊಡ್ಡ ಅಂಗಡಿ ಹೆಸರು ಒರೆದ ಪ್ಯಾಕೆಟ್ಟು, ಪ್ಲಾಸ್ಟಿಕ್ ಕವರು ಎಲ್ಲಾ ಆರಿಸ್ಕೊಂಡು ಬಾ. ನನ್ನ ತಂಗೀ ಮನೇಲ ಕರೋಲ್‌ಬಾಗು ಪಾಲಿಕಾ ಬಜಾರ್‌ದೆಲ್ಲಾ ಬಟ್ಟೆ ಸೀರೆ ಸ್ವೆಟರ್‌ಗಳ ಪ್ಲಾಸ್ಟಿಕ್ ಚೀಲ ಇದ್ದ ಇರತ್ತೆ ಇಸ್ಕೋ. ಇಲ್ಲಿಗೆ ಬಂದು ಅದೇ ರಾತ್ರಿ ಸೂಪರ್ ಬಜಾರ್‌ಗೆ ಹೋಗಿ ಎಲ್ಲಾ ತೊಗೊಂಡು ಬಾ. ನೀನು ಹೋಗೋಕೆ ಮುಂಚೆ ತಂದಿಟ್ರೂ ಆಯ್ತು. ಅಲ್ಲಿಂದ ತಂದ ಕವರ್‌ನಲ್ಲಿ ಹಾಕಿ ಪಿನ್ನು ಮಾಡಿ ಕೊಡು. ಜನಕ್ಕೆ ಕಂಟೆಂಟ್ಸ್‌ಗಿಂತ ಕಂಟೈನರ್ ಮುಖ್ಯ ದುಡ್ಡೇನು ಹೆಚ್ಚಿನ ವ್ಯತ್ಯಾಸ ಇರಲ್ಲ" ಎಂದಾಗ ಗೆಳೆಯನ ಬ್ರಿಲಿಯಂಟ್ ಐಡಿಯಾಗೆ ಸೀತಾರಾಮು ಮನಸೋತ.

ಮಧುಚಂದ್ರದಂತೆ ದಿಲ್ಲಿ ಆಗ್ರಾ ನೈನಿತಾಲ್, ಹೃಷಿಕೇಶ ಹರಿದ್ವಾರ ಕಾಶಿ ಎಲ್ಲಾ ಸುತ್ತಾಡಿದ್ರು. ಟ್ರೈನಿಂಗ್ ಅಂತೂ ಮುಗಿಯಿತು. ವಿಶ್ವನ ಉದ್ದುದ್ದ ಸಲಹೆಗಳೆಲ್ಲಾ ನೀರಿನಲ್ಲಿ ಹೋಮವಾಯ್ತು. ಸೀತಾರಾಮು ವಾಪಸ್ಸು ಬಂದಾಗ ಕಿವಿಯ ಲೋಲಾಕುಗಳಂತೆ ಆ ಕಡೆ ಈ ಕಡೆ ಒಂದೊಂದು ಮೋಡಗಳನ್ನು ನೇತು ಹಾಕ್ಕೊಂಡು, ಎರಡಕ್ಕೆ ಬದಲು ನಾಲ್ಕು ಸೂಟ್‌ಕೇಸು ಹೊತ್ತಿಸಿಕೊಂಡು, ಒಂಟೆಯ ಬೆನ್ನಿನ ಡುಬ್ಬದಂತೆ ಫುಟ್‌ಬಾಲ್ ಚೀಲ ಒನ್ನಿಗೆ ಹಾಕಿ ಕ್ರಿಕೆಟ್ ಸೆಟ್ಟಿನ ಜೂಪು ಮೂತಿಯಿಂದ ತಿವಿಸಿಕೊಳ್ಳುತ್ತಾ ಏರ್‌ಬ್ಯಾಗ್ ಹಿಡಿದು ರೈಲಿನಿಂದ ಕೆಳಗಿಳಿದ.

"ಲಗೇಜ್ ಮಾಡ್ಸಿದ್ದೀರ ಸರ್' ಹಿಂದೆಯೇ ಟಿ. ಟಿ. ಇ. ಓಡಿಬಂದು ಕೇಳ್ದಾಗ "ಯಾವ ಲಗ್ಗೇಜು" ಎಂದ.

"ಇನ್ಯಾವ್ದು ಎಂದು ಆತ ಇವನನ್ನು ಅಪಾದಮಸ್ತಕ ನೋಡಿ.

"ಒಂದ್ನಿಮಿಷ ಬಂದ್ಬಿಡಿ ಸರ್" ಎನ್ನುತ್ತ ಆಫೀಸಿನೊಳಗೆ ಕರೆದೊಯ್ದು ಲಗೇಜು ತೂಕ ಹಾಕ್ಸಿ.

"ನಿಮ್ಮ ಲಗ್ಗೇಜು ಜಾಸ್ತಿ ಇದೆ ಸರ್' ಎನ್ನುತ್ತ ಹೆಚ್ಚಿನ ಲಗೇಜಿಗೆ ದುಡ್ಡು ದಂಡ ಇವನಿಂದ ವಸೂಲ್ಮಾಡಿ ರಸೀತಿ ಇತ್ತ ಈ ಹೆಚ್ಚಿನ ಲಗೇಜ್ ದುಡ್ಡು ಯಾರ್ಯಾರ್ಗೆ ಎಷ್ಟೆಷ್ಟು ಹಂಚ್ಬೇಕು ಎಂದು ತಲೆ ಕೆಡಿಸಿಕೊಳ್ಳುತ್ತಾ ಹೆಜ್ಜೆ ಇಡುತಿದ್ದಾಗ ಪರಿಚಯುದವರೊಬ್ಬರು ಸಿಕ್ಕ 'ಟ್ರೈನಿಂಗ್ ಹೇಗಾಯ್ತು ಎಂದು ಕೇಳ್ದಾಗ 'ಚೆನ್ನಾಗೇ ಆಯ್ತು ಎಂದು ರಾಗವೆಳೆದ ಸೀತಾರಾಮು.

ಕೊನೆಗೊಮ್ಮೆ ವೀರಪ್ಪನ್ ಅಸುನೀಗಿದ. ಧೂರ್ತರಾಜಕಾರಣಿ, ಭ್ರಷ್ಟ ಅಧಿಕಾರಿಗಳನ್ನು ದಿಟ್ಟತನದಿಂದ ಇದುರಿಸಿ ಹೋರಾಡಿದ್ದರಿಂದ ಅವನಿಗೆ ವೀರಸ್ವರ್ಗ ಸಿಕ್ಕಿತು. ಸ್ವರ್ಗಕ್ಕೆ ಹೋದ ದಿನ ದೇವತೆಗಳೆಲ್ಲಾ ಕುತೂಹಲದಿಂದ ಬಂದ್ರು ಇವನನ್ನು ನೋಡುವವರೇ. ವೀರಪ್ಪನ್‌ಗೆ ತನ್ನ ಶೌರ್ಯದ ಬಗ್ಗೆ ಹೆಮ್ಮೆಯುಂಟಾಯಿತು. ಸ್ವರ್ಗದ ಆಡಳಿತಾಧಿಕಾರಿಗೆ ಹೇಳಿದ. "ಕಾಡಿನಲ್ಲಿ ನಾನಿದ್ದು ಎಲ್ಲರನ್ನೂ ಹೆದರಿಸಿದ್ದು ಹೇಗೆ ಅಂತ ಭಾಷಣ ಮಾಡುಕ್ಕೆ ತಯಾರು" ಅಧಿಕಾರಿ ತಕ್ಷಣ ಸ್ವರ್ಗ ನಿವಾಸಿಗಳ ಒಂದು ಸಭೆ ಕರೆದ ವೀರಪ್ಪನ್ ವೇದಿಕೆಯು ಮೇಲೆ ಕೂತಿದ್ದಾನೆ. ಭಾಷಣ ಮಾಡುಕ್ಕೆ ಮುಂಚೆ ಅಧಿಕಾರಿ ವೀರಪ್ಪನ್‌ಗೆ ಕಿವಿಯಲ್ಲಿ ಹೇಳಿದ

"ಈ ಸಭೆಯಲ್ಲಿ ಹಿಡಂಬ, ಮಾರೀಚ ಇಬ್ರೂ ಮುಂದಿನ ಸಾಲಿನಲ್ಲೇ ಕೂತಿರೋದು ಮರೀಬೇಡಿ"



"ಮಂಗಳಾರತಿಗೆ ಒಂದು ರೂಪಾಯಿ !
ಯಾವ ಕಾಲದ ಮಾತಮ್ಮ"

ಡ್ರೀಂ ಕ್ಯಾಬಿನೆಟ್

ಶಿವು

ಆಗಸ್ಟ್ ಹದಿನೈದರ ಸಂಜೆ. ಕ್ಲಬ್ಬಿನಲ್ಲಿ ಕುಳಿತಿದ್ದ ನಮ್ಮ ಗುಂಪಿನ ಸದಸ್ಯರಿಗೂ ಒಂದು ರೀತಿಯಲ್ಲಿ ಸ್ವಾತಂತ್ರ್ಯ ಸಿಕ್ಕಂತಿತ್ತು. ದೂರದರ್ಶನದ ಹಿಂದಿ ಚಿತ್ರದ ಪ್ರಯುಕ್ತ ಅವರೆಲ್ಲರಿಗೂ ತಮ್ಮ ತಮ್ಮ ಪತ್ನಿಯರಿಂದ ನ್ಯಾಗಿಂಗ್ ಹಾಲಿಡೇ. ಮಾತುಕತೆ ಭರದಿಂದ ಸಾಗಿತ್ತು.

"ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಆದ್ರೂ ಬಾರ್ಸಿಲೋನಾದಲ್ಲಿ ಒಂದೇ ಒಂದು ಕಂಚಿನ ಪದಕಕ್ಕೂ ಗತಿ ಇಲ್ಲದ ಹಾಗಾಯ್ತಲ್ಲೋ! ಏನಾಗಿದೆ ಅಂತೀನಿ ನಮ್ಮ ದೇಶಕ್ಕೆ ?" ರವಿ ಒಂದು ರ್ಹೆಟಾರಿಕಲ್ ಪ್ರಶ್ನೆ ಎಸೆದ.

"ಲಕ್ಷ್ಮಣ್ ಕಾರ್ಟೂನಿನಲ್ಲಿ ಬಂದಿತ್ತಲ್ಲ. ದೇವರ ದಯೆಯಿಂದ ಬಾರ್ಸಿಲೋನಾದಲ್ಲಿ ತಗಡು, ಪ್ಲಾಸ್ಟಿಕ್ ಹಾಗೂ ರಟ್ಟಿನ ಪದಕಗಳನ್ನ ಇಟ್ಟಿರಲಿಲ್ಲ. ಹಾಗೇನಾದ್ರೂ ಇಟ್ಟಿದ್ರೆ ಅದನ್ನೂ ಗಳಿಸದೇ ಬರೀ ಕೈಲಿ ಹಿಂದಿರುಗಬೇಕಾಗ್ತಿತ್ತು ಅಂತ" ರೆಡ್ಡಿ ಹೇಳಿದ. ಆವ ಲಕ್ಷ್ಮಣ್ ಭಕ್ತ.

"ಒಲಂಪಿಕ್ ಒಂದ್ರಲ್ಲೇ ಅಲ್ಲ ನಮ್ಮ ಗೋಳು. ತಾಂತ್ರಿಕ ತರಬೇತಿ ಹೊಂದಿದವರಲ್ಲಿ ಜಗತ್ತಿನ ಮೂರನೇ ಸ್ಥಾನದಲ್ಲಿದ್ರೂ ಭಿಕಾರಿಗಳ ತರಹ ಹೊರದೇಶವಲ್ಲಿ ಭಿಕ್ಷೆ ಬೇಡೋದು ತಪ್ಪಲಿಲ್ಲ, ಏರುತ್ತಿರುವ ಜನಸಂಖ್ಯೆ, ಅನಕ್ಷರತೆ, ಒಂದೇ ಎರಡೇ ನಮ್ಮ ಮೊಮ್ಮಕ್ಕಳು ಇದಿರಿಸಿ ನಾಲ್ಟ್ ಮಾಡಬೇಕಾದ ಸಮಸ್ಯೆಗಳು"

"ಯಾಕೆ ಹಾಗೆ ಒಂದೇ ಜಿಗಿತಕ್ಕೆ ಮೊಮ್ಮಕ್ಕಳಿಗೆ ಹಾರಿದೆ ರವಿ. ನಮ್ಮ ಮಕ್ಕಳೇನೂ ಸಾಧಿಸೋಲ್ಲ ಅಂದುಕೊಂಡಿದ್ದೀಯೇನೋ" ರಘು ಉವಾಚ.

"ನಮ್ಮ ಮಕ್ಕಳು ಸಾಧಿಸ್ತಾ ಇರೋದು ನೋಡ್ತಾನೇ ಇದ್ದೇವಲ್ಲಾ. ಜೀನ್ಸ್, ಟಾಪ್ ಹಾಕ್ಕೊಂಡು ಮೆರೆದಾಡೋದು. ಕುಂಡ ಕಂಡ ಅಮೇರಿಕನ್ ಕಾಲೇಜುಗಳಿಗೆ

ಅರ್ಜಿ ಗುಜರಾಯಿಸೋದು. ಮಾತೃ ಭಾಷೇನೇ ಮರೆತ ಮಕ್ಕಳು ಮಾತೃ ಭೂಮಿಗೆ ಏನು ಮಾಡ್ತಾರೋ. ನೀನೂ ಚೆನ್ನಾಗಿ ಹೇಳಿದೆ" ರವಿಯ ದನಿಯಲ್ಲಿ ವಿಷಾದದ ಛಾಯೆ ಇತ್ತು. ಅವನ ಇಬ್ಬರು ಮಕ್ಕಳೂ ಅಮೆರಿಕಾದಲ್ಲಿ ನೆಲಸಿ ಹಾಯಾಗಿದ್ದಾರೆ.

ಅಷ್ಟರಲ್ಲಿ ದೇವಾನಂದಾನಿ ಒಳಗೆ ಬಂದ. ತನ್ನ ಫೇವರೆಟ್ ಆಸನದಲ್ಲಿ ಆಸನಾಸೀನನಾಗಿ ಒಂದು ಗುಟುಕು ತೀರ್ಥ ಹೀರುವವರೆಗೆ ಯಾರೂ ಮಾತನಾಡಲಿಲ್ಲ.

"ನಾನು ಒಳಗೆ ಬರ್ತಾ ಇದ್ದಾಗ ರವಿ ಮಾತೃ ಭೂಮಿ ಬಗ್ಗೆ ಏನೋ ಹೇಳ್ತಾ ಇದ್ದದ್ದು ಕೇಳಿಸ್ತು. ಓಬೀರಾಯನ ಕಾಲದಲ್ಲಿ ನಾನು ಹೈಸ್ಕೂಲು ಓದುತ್ತಿದ್ದಾಗ ಆ ಹೆಸರಿನ ಕನ್ನಡ ಪುಸ್ತಕವೊಂದು ನಮಗೆ ಪಠ್ಯ ಪುಸ್ತಕ ಆಗಿತ್ತು. ಕಥೆ ಏನಿತ್ತೋ ಈಗ ಮರೆತು ಹೋಗಿದೆ. ಹೊದಿಕೆ ಮೇಲೆ ಮಾತ್ರ ಕೆಟ್ಟ ಕೆಟ್ಟದಾಗಿ ಬರೆದ್ದಿದ್ದ ಒಬ್ಬ ಹುಡುಗ ಹುಡುಗಿ ಚಿತ್ರ ಇತ್ತು. ಆ ಚಿತ್ರಕಾರ ಮಹಾಶಯ ಹುಡುಗಿ ಎರಡು ಕಾಲುಗಳನ್ನೂ ಎಡಗಾಲು ಮಾಡಿದ್ದ. ದವ್ವ ದವ್ವ ಅಂತ ನನ್ನ ತಂಗೀನ ಹೆದರಿಸುಕ್ಕೆ ಆ ಪುಸ್ತಕ ಉಪಯೋಗಿಸ್ತಾ ಇದ್ದೆ ... ದೇವೂ ಹೇಳ್ತಾ ಇದ್ದ ಸಂಗತೀನ ಅರ್ಧಕ್ಕೆ ತುಂಡು ಹಾಕಿ ದೇವೇಂದ್ರ ಮಧ್ಯೆ ಬಾಯಿ ಹಾಕಿದ.

"ದೇವೂ ನಿನಗೆ ನಿಜವಾಗಿ ಅರಳು ಮರಳು ಶುರು ಆಗಿದೆ. ಆ ಪುಸ್ತಕ ನನಗೂ ಪಠ್ಯ ಪುಸ್ತಕ ಆಗಿತ್ತು. ಅದು ಮಾತೃ ಭೂಮಿ ಅಲ್ಲ ಪುಣ್ಯ ಭೂಮಿ ಅಂತ."

"ಪುಣ್ಯ ಭೂಮೀನೋ ಮಾತೃ ಭೂಮೀನೋ ಒಟ್ಟಿನಲ್ಲಿ ರೆಫರೆನ್ಸ್ ಒಂದೇ ತಾನೆ. ಅದಿರ್ಲಿ, ಈಗ ನಮ್ಮ ಪುಣ್ಯ ಭೂಮಿಗೆ ಏನಾಗಿದೆ ಧಾಡಿ. ಯಾಕೆ ರವಿ ಹಾಗೆ. Flat ಬೀರ್ ಕುಡಿದ ಮುಖ ಮಾಡ್ಕೊಂಡಿದ್ದಾನೆ?" ದೇವು ಕೇಳಿದ.

ಇನ್ನೇನಾಗ್ಬೇಕೋ ದೇವೂ. ಕೊಳ್ಳೆ, ಕೊಳ್ಳೆ ಹೊಡೀತಾ ಇದ್ದಾರಲ್ಲಾ ದೇಶಾನ. ಒಂದು ಕಡೆ ಅತೀ ಬುದ್ಧಿವಂತಿಕೆಯ ಹರ್ಷದ್‌ಗಳು. ಇನ್ನೊಂದು ಕಡೆ ಮನಸ್ಸಾಕ್ಷಿನೇ ಇಲ್ಲದ ರಾಜಕಾರಣಿಗಳು ಇದರ ಮಧ್ಯೆ ಏನಾಗ್ತಾ ಇದೆ ಅಂತ ಒಂದು ಚೂರೂ ತಿಳೀದೆ, ಸಿನಿಮಾ ನಟ ನಟಿಯರ ಫಲಕ ಹೊತ್ತು ಬೀದಿ ತಿರುಗ್ತಿರೋ ಅಮಾಯಕ ಬಡಜನತೆ. ಸಾಲ್ವಡಾರ್ ಡಾಲಿ ನಮ್ಮ ದೇಶದಲ್ಲೇನಾದ್ರೂ ಹುಟ್ಟಿದ್ರೆ ಅವನ ಸರ್ರಿಯಲ್ ಚಿತ್ರಗಳ ರಚನೆಗೆ ಒಳ್ಳೇ ಗ್ರಾಸ ಸಿಗ್ತಿತ್ತು" ದೇವೇಂದ್ರ ನಮ್ಮ ದೇಶದ ಪರಿಸ್ಥಿತಿನ ಸ್ಪಷ್ಟವಾಗಿ ಕ್ಯಾರಿಕೇಚರ್ ಮಾಡಿದ.

"ಲೋ ದೇವೇಂದ್ರ ಅಪ್ಪು Cry-baby ಆಗ್ಬೇಡ್ವೋ. ಯಾವ ಸಮಸ್ಯೆ ಇದ್ರೂ ಅದಕ್ಕೆ ತಕ್ಕ ಪರಿಹಾರ ಇದ್ದೇ ಇರುತ್ತೆ. ಬುದ್ಧಿ ಉಪಯೋಗಿಸಿ ಪರಿಹಾರ ಹುಡುಕಬೇಕು ಅಷ್ಟೆ. ಅದು ಬಿಟ್ಟು ದಮಯಂತಿ ಹೋದ ಮೇಲೆ ಅಳ್ತಾ ಇದ್ದ ನಳನ ಹಾಗೆ ಗೋಳಾಡೋದು ಯಾವ ಗಂಡಸ್ತನ"

"ಹೌದು ದೇವು. ನಮ್ಮ ದೇಶದಲ್ಲಿ ಪ್ರತಿಭೆಗೆ ಕೊರತೆ ಇಲ್ಲ. ಆದರೆ ಅದನ್ನು ಉಪಯೋಗಿಸೋದಕ್ಕೆ ಸರಿಯಾದ ಅವಕಾಶ ಇಲ್ಲ ಅಷ್ಟೆ. ಅದಕ್ಕೇ ಪ್ರತಿಭಾ ಪಲಾಯನ ಆಗ್ತಾ ಇರೋದು. ಅದ್ನಿರಿ ಈ ಸಮಸ್ಯೇಗೆ ನಿನ್ನ ಒರಿಜಿನಲ್ ಪರಿಹಾರ ಹೇಳು ಕೇಳೋಣ" ಪ್ರಕಾಶ ದೇವುಗೆ ತನ್ನ ಭಾಷಣ ಶುರು ಮಾಡುಕ್ಕೆ ಒಂದು ಓಪನಿಂಗ್ ದಯಪಾಲಿಸಿದ.

ದೇವು ಗಂಟಲು ಸರಿಮಾಡಿಕೊಂಡು ಶುರುಮಾಡಿದ.

"ನಾನಾಗಿದ್ರೆ ಮೊಟ್ಟ ಮೊದಲು ಈಗಿರೋ ಕೇಂದ್ರದ ಮಂತ್ರಿಗಳನ್ನೆಲ್ಲಾ ಒದ್ದು ಹೊರಗಟ್ಟಿ ದೇಶದಲ್ಲಿ ಅಧ್ಯಕ್ಷರ ಆಡಳಿತ ತರ್ತಿದ್ದೆ. ಆ ಅಧ್ಯಕ್ಷರಿಗೆ ಕೆಲಸ ನಿರ್ವಹಿಸೋದಕ್ಕೆ ಒಂದು ಕ್ಯಾಬಿನೆಟ್ಟು. ಅದರಲ್ಲಿ ಎಕ್ಸ್‌ಪರ್ಟ್ಸ್‌ಗೆ ಮಾತ್ರ ಅವ ಕಾಶ. ಟ್ಯಾಲೆಂಟ್ ಇರೋರ್ಗೇ ಜಾಗ. ಆಯ್ಕೆ ಬಹು ಸುಲಭ. ಹರ್ಷದ್ ಮೆಹ್ತಾ. ಏನೂ ಇಲ್ದೇ 3000 ಕೋಟಿ ಹಣಮಾಡಿದೋನು. ದೇಶಾನ ಸಂಪದ್ಭರಿತ ಮಾಡೋದ್ರಲ್ಲಿ ಸಂದೇಹಾನೇ ಇಲ್ಲ. ಒಂದೇ ವರ್ಷದಲ್ಲಿ ನಮ್ಮ ಖಜಾನೆ Fort knoxನೂ ಮೀರಿಸುತ್ತೆ. ಇನ್ನು ಕೈಗಾರಿಕಾ ಮಂತ್ರಿ. ಮಾರುತಿ–ನೇಲ್ ಖ್ಯಾತಿ, ಕೃಷ್ಣಮೂರ್ತಿ. ವಿದೇಶೀ ಬಂಡವಾಳನೆಲ್ಲಾ ಐ. ಎಂ. ಎಫ್. ಹಂಗಿಲ್ದೇ ತರೋಕ್ಕೆ ಅವನೇ ಸರಿ.....

"ಹೋಂ ಮಿನಿಸ್ಟರ್ ಯಾರ್ನ ಮಾಡ್ತೀಯಾ ದೇವು ?"

"ಹಾಜಿ ಮಸ್ತಾನ್. ಗಲಾಟೆ ಮಾಡೋರ್ನ ರಾತ್ರೋ ರಾತ್ರಿ ಇಲ್ಲಾ ಅನ್ಸಿದ್ರೆ ದೇಶದಲ್ಲಿ ಶಾಂತಿ ತಾಂಡವವಾಡುತ್ತೆ"

"ರಕ್ಷಣಾಮಂತ್ರಿ ಯಾರು ?"

"ಸ್ವರಕ್ಷಣೇಲಿ ನುರಿತವನು ದೇಶಾನೂ ರಕ್ಷಣೆ ಮಾಡೇ ಮಾಡ್ತಾನೆ. ಆದಕ್ಕೆ ರಕ್ಷಣಾ ಮಂತ್ರಿಗೆ ನನ್ನ ಆಯ್ಕೆ ಮಿಸ್ಟರ್ ವೀರಪ್ಪನ್. ಇನ್ನು ಮನರಂಜನೇ

ಮುಂತ್ರೀಗೆ ದೇವಿಲಾಲರನ್ನೇ ಕರಿಸ್ಬೇಕು. ತಿಂಗಳು ತಿಂಗಳಿಗೊಮ್ಮೆ ರಾಜೀನಾಮೆ ಕೊಡ್ತಾ ಇದ್ರೆ. ಪತ್ರಿಕೆಗಳಿಗೂ ಒಳ್ಳೇ ಕಾಪಿ ಸಿಗುತ್ತೆ.

"ಕಾಶ್ಮೀರ ಸಮಸ್ಯೆ ಬಗ್ಗೆ ನಿನ್ನ ಪರಿಹಾರ ಏನು ?"

"ಒಂದೇ ದಿನದಲ್ಲಿ ಕಾಶ್ಮೀರಾನ ಪಾಕೀಸ್ಥಾನಕ್ಕೆ ವರ್ಗಾಯಿಸಿ, ಜಮ್ಮೂನಲ್ಲಿ ಸ್ವತಂತ್ರ ಕಾಶ್ಮೀರ ಯೋಧರಿಗೆ ಟ್ರೈನಿಂಗ್ ಕ್ಯಾಂಪ್‌ಗಳನ್ನ ಏರ್ಪಡಿಸ್ತೀನಿ. ಆಗ ತಲೆ ನೋವೆಲ್ಲಾ ಪಾಕೀಸ್ಥಾನಕ್ಕೆ. ನಾವು ಮಾತ್ರ ಕಾಶ್ಮೀರ ಸ್ವತಂತ್ರ ಆಗ್ಬೇಕು ಅಂತ ಆಗಿಂದಾಗ್ಗೆ ಹೇಳಿಕೆ ಕೊಡ್ತಾ ನಿರಾತಂಕವಾಗಿ ಇರಬಹುದು"

"ದೇವೂ ಎಲ್ಲಾ ಹೇಳ್ದೆ. ನಿನ್ನ ಡ್ರೀಂ ಕ್ಯಾಬಿನೆಟ್‌ನಲ್ಲಿ ಪ್ರಧಾನಮಂತ್ರಿ ಯಾರು ಅಂತ ಹೇಳ್ಲೇ ಇಲ್ವಲ್ಲಾ

"ಪ್ರಧಾನಮಂತ್ರಿ ಮಾತ್ರ ಈಗಿರೋ ಪ್ರಧಾನ ಮಂತ್ರೀನೆ. ಇಷ್ಟೆಲ್ಲಾ ಮಂತ್ರಿ ಮಂಡಲ ಮಾಡಿದ್ರೂ ಸುಮ್ನೆ ನೋಡ್ತಾ ಕೂತಿರೋರು ಇನ್ಯಾರು ಸಿಗ್ತಾರೆ ?

ಸಭಿಕರೆಲ್ಲಾ ದೇವೂ ಮಾತನ್ನ ಅರಗಿಸಿಕೊಳ್ತಾ ಇದ್ದಾಗ ದೇವೇಂದ್ರ "ಎಲ್ಲಾ ಸರಿಯಾಯ್ತು ದೇವು. ಆದ್ರೆ ನಮ್ಮ ರಾಷ್ಟ್ರಗೀತೆ ಮಾತ್ರ ಸ್ವಲ್ಪ ಮಾರ್ಪಾಟು ಮಾಡಬೇಕು.... ಅಂತ ಶುರುಮಾಡಿದ. ಅಷ್ಟರಲ್ಲಿ ದೇವು ಬಾಯಿ ಹಾಕಿ,

"ಹೌದು ದೇವೇಂದ್ರ. ಅದನ್ನ ಹೇಳೋದು ಮರೆತಿದ್ದೆ.

ಜಯ ಜಯ ಹೇ ರತ್ನಾಕರ ಜಯತೇ. ಭಾರತ ಭಾಗ್ಯ ವಿಧಾತಾ ಅಂತ ಬದ್ಲಾಯಿಸ್ತೀನಿ"

"ಥೂ ನಿನ್ಮನೆ ಹಾಳಾಗ, ನಾನು ಹೇಳೋಣಾ ಅಂತಿದ್ದ ಪಂಚ್ ಲೈನ್‌ನ್ನ ಕದ್ದು ಬಿಟ್ಟೆಯಲ್ಲೋ. ನಿನಗೆ ರೌರವಾದಿ ನರಕ ಒಗ್ಲಿ" ಅಂತ ದೇವೂನ ಶಪಿಸುತ್ತಾ ದೇವೇಂದ್ರ ಎದ್ದು ಹೋದ.

ಹೀಗೂ ಉಂಟು

ಸೀ. ಆರ್. ಸತ್ಯ

ಯಜಮಾನ್ ಶಂಕರಯ್ಯನವರು ನಮ್ಮ ಹಳ್ಳಿಯ ವಯೋವೃದ್ಧರು. ಜೀವನದ ಏರುಪೇರುಗಳನ್ನ ತಮ್ಮ ಸುದೀರ್ಘ ತೊಂಬತ್ತೇಳು ವರ್ಷಗಳ ಆಯುಸ್ಸಿನಲ್ಲಿ ನೋಡಿ, ಅನುಭವಿಸಿ, ಪಳಗಿದವರು, ಈಗಲೂ ಅವರ ಆರೋಗ್ಯ ಅಂದರೆ ಹಸಿವು, ನಿದ್ರೆ, ಊಟ ಇತ್ಯಾದಿಗಳು–ಮಧ್ಯ ವಯಸ್ಕರಿಗಿಂತಲೂ ಚೆನ್ನಾಗಿಯೇ ಉಳಿದಿವೆ. ನಮ್ಮ ಆಧುನಿಕ ಜೀವನದ ಜಂಜಾಟವನ್ನು, ಅದರ ತರಹಾವರಿಯನ್ನು ಕಂಡು ಶಂಕರಯ್ಯ ನವರು ಆಗಾಗ್ಗೆ ಮುಗುಳ್ನಗೆ ಬೀರುವುದುಂಟು.

ಸರ್ಕಾರದ ಆದೇಶದಿಂದ ಒಮ್ಮೆ ನಮ್ಮ ಹಳ್ಳಿಗೆ ಕಣ್ಣು ಡಾಕ್ಟರುಗಳ ತಂಡ ವೊಂದು ಬಂತು. ಅವರ ಶಿಬಿರಕ್ಕೆ ಶಂಕರಯ್ಯನವರೂ ಹೋದರು. ಡಾಕ್ಟರು ಶಂಕರಯ್ಯನವರ ಕಣ್ಣುಗಳನ್ನ ಪರೀಕ್ಷೆ ಮಾಡಲು ಹದಿನೈದು ಅಡಿ ದೂರದಲ್ಲಿ ತಗಲು ಹಾಕಿದ್ದ ಅಕ್ಷರ ಮಾಲೆಯನ್ನು ಓದಲು ಹೇಳಿದರು. "ನನ್ನ ಕೈಲಿ ಆಗೊಲ್ಲ!" ಅಂತ ಅಂದರು ಶಂಕರಯ್ಯ. ಡಾಕ್ಟರು ತಕ್ಷಣವೆ ಒಂದು ನೋಡಾ ಗ್ಲಾಸಿನ ಪ್ರಿಸ್ಕ್ರಿಪ್ಶನ್ ಬರೆದು ಕೊಟ್ಟರು. ಶಂಕರಯ್ಯನವರು ಅದನ್ನು ಕಿಸೆಯಲ್ಲಿ ಡುತ್ತಾ ಸುಮಾರು ಅಲ್ಲಿಂದ ಮೂವತ್ತಡಿ ದೂರದಲ್ಲಿದ್ದ ನೋಟೀಸ್ ಬೋರ್ಡ್ ಕಡೆ ತಿರುಗಿ "ಓಹೋ, ಈ ಶಿಬಿರ ಒಂದು ವಾರ ಮಾತ್ರ ಅಂತ ನೋಟೀಸು ಹಾಕಿ ದ್ದೀರಿ!" ಅಂತ ಅಂದರು. ಅದಕ್ಕೆ ಡಾಕ್ಟರು, "ಅಲ್ಲ ಸ್ವಾಮಿ, ಹದಿನೈದು ಅಡಿ ದೂರದ ಅಕ್ಷರಮಾಲೆ ಓದೋಕ್ಕೆ ಆಗೋಲ್ಲ ಅಂದರಿ. ಅದಕ್ಕಿಂತ ದೂರ ಇರೋ ಆ ನೋಟೀಸನ್ನ ಹೇಗೆ ಓದಿದೀರಿ?" ಅಂತ ಆಶ್ಚರ್ಯಪಟ್ಟರಂತೆ. ಅದಕ್ಕೆ ಶಂಕರಯ್ಯ ನವರು, "ಅಪ್ಪಾ ಆ ನಿನ್ನ ಪರೀಕ್ಷಾ ಅಕ್ಷರಮಾಲೆ ಕನ್ನಡದಲ್ಲಿದ್ದರೆ ಅದನ್ನೂ ಓದ್ತಿದ್ದೆ. ಹೋಗಲಿ ಬಿಡು" ಅಂತ ಮನೆಗೆ ಹೊರಟರಂತೆ. ಆ ಡಾಕ್ಟರು ಹಾಗೇ ಸ್ವಲ್ಪ ಹೊತ್ತು ಕಣ್ಣುಬಿಟ್ಟಗೊಂಡು ನಿಂತರು!

ಇನ್ನೊಮ್ಮೆ ಹೊಟ್ಟೆ ಡಾಕ್ಟರುಗಳ ತಂಡ ಬೇರೆ ನಮ್ಮ ಹಳ್ಳಿಗೆ ಬಂತು. ಹಳ್ಳಿ ಯವರಿಗೆಲ್ಲಾ ಯಾವುದೋ ಜಠರ ವೇದನೆ ಖಾಯಿಲೆ ತಗಲಿದೆ ಅಂತ ಬೆಂಗಳೂರಿ ನಲ್ಲಿ ಯಾರೋ ರಿಪೋರ್ಟ್ ಮಾಡಿದ್ದಕ್ಕೆ ಈ ಶಿಬಿರ ಹೂಡಿದ್ದಂತೆ. ಸಾಲಾಗಿ ನಿಂತು ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದ ಹಳ್ಳಿಯವರಿಗೆಲ್ಲಾ ಡಾಕ್ಟರು "ಬೆಳಿಗ್ಗೆ ರಾತ್ರಿ

ಈ ಗುಳಿಗೆಗಳನ್ನ ನುಂಗಿ ಕಾದಾರಿದ ನೀರು ಕುದಿಯಿರಿ; ಮೂರು ದಿನಕ್ಕೆ ಸರಿ ಹೋಗುತ್ತೆ" ಅಂತ ಆಶ್ವಾಸನೆ ನೀಡುತ್ತಿದ್ದರು. ಇದನ್ನ ನೋಡುತ್ತಿದ್ದ ಶಂಕರಯ್ಯ ನವರು ಅಲ್ಲೇ ಇದ್ದ ಡಾಕ್ಟರಿಗೆ "ಸ್ವಾಮಿ, ಈ ಖಾಯಿಲೆ ವಿಷಯ ನನಗೆ ಗೊತ್ತು. ಇದರ ಹೆಸರು 'ಹಸಿವು' ಅಂತ. ಈ ಬಾರಿ ಮಳೆ ಇಲ್ಲದ್ದು, ಬೆಳೆಯೂ ಇಲ್ಲ, ಆಕಳಿಗೆ ಮೇವೂ ಇಲ್ಲ. ಸಾಲದಲ್ಲಿ ಬಿದ್ದು ಸೊರಗಿ ಹೋಗಿರೋ ನಮ್ಮ ಹಳ್ಳಿಗರಿಗೆ ಬೇಕಾಗಿರೋದು. ದಿನಕ್ಕೆ ಎರಡು ಗುಳುಗೆಗಳಲ್ಲ! ಹೊಟ್ಟೆ ತುಂಬೋ ಊಟ!!" ಅಂತ ಹೇಳಿದರು. ಪಾಪ, ಡಾಕ್ಟರುಗಳು ಪೆಚ್ಚು ಮೋರೆ ಹಾಕ್ಕೊಂಡರು.

ನಮ್ಮ ಹಳ್ಳಿಯ ಸರ್ಕಾರಿ ಸ್ಕೂಲಿನ ಉದ್ಘಾಟನಾ ಸಮಾರಂಭದಲ್ಲಿ ವೇದಿಕೆಯ ಮೇಲೆ ಶಂಕರಯ್ಯನವರೂ ಉಪಸ್ಥಿತರಾಗಿದ್ದರು. ಎಷ್ಟಾದರೂ ಹಿರಿಯರಲ್ಲವೆ? ಒಂದೆರಡು ಮಾತಾಡಿ ಅಂತ ಜಿಲ್ಲಾಧಿಕಾರಿಗಳು ಅವರನ್ನು ಕೇಳಿಕೊಂಡಾಗ ಶಂಕರಯ್ಯನವರು ಹೇಳಿದ್ದಿದು: "ಏನು ವಿದ್ಯಾಭ್ಯಾಸವೋ ಏನೋ ಅಂತೀನಿ. ಈಗಿನ ಕಾಲದಲ್ಲಿ, ಒಂದನೇ ಸ್ಟಾಂಡರ್ಡ್ ಮಕ್ಕಳು ಒಂದು ಕಿಲೋಗ್ರಾಂ ತೂಕದ ಪುಸ್ತಕ ಗಳನ್ನ ಹೊರಬೇಕಂತೆ. ಹಾಗೇ ಪಾಸಾಗ್ತಾ ಪಾಸಾಗ್ತಾ ಹನ್ನೆರಡನೇ ಸ್ಟಾಂಡರ್ಡ್ ಬರೋ ಹೊತ್ತಿಗೆ ಹನ್ನೆರಡು ಕಿಲೋ ಗ್ರಾಂ ತೂಕ ಹೊರಬೇಕಂತೆ–ಒಂದೊಂದು ಸ್ಟಾಂಡರ್ಡಿಗೆ ಒಂದೊಂದು ಕಿಲೋ ಲೆಕ್ಕ ನೋಡಿ. ಆದೇ ಕಾಲೇಜು ಸೇರಿದ ತಕ್ಷಣ ಎಲ್ಲರೂ ಬರೀ ಕೈಯಲ್ಲಿ ಹೋಗ್ತಾರೆ! ನಾನು ಓದದಿದ್ದರೂ ಇಷ್ಟು ಹೇಳಬಲ್ಲೆ ಈಗೆಲ್ಲಾ ತಿರುವು ಮುರುವು ಆಗ್ಹೋಗಿದೆ. ಆಗ ಕಾಲೇಜಿಗೆ ಹೋಗೋವರು ಅಂದರೆ, ಊರ ಪುಸ್ತಕಗಳನ್ನೆಲ್ಲಾ ಹೊತ್ಕೊಂಡು ಹೋಗೋವ್ರು, ಅಷ್ಟೇ ಅಲ್ಲ· ಅವನ್ನ ಓದೂ ಓದೋರು ನೋಡಿ ;"

ಅವರ ಮೊಮ್ಮಗ ಹೋಲ್‌ಸೇಲ್ ವ್ಯಾಪಾರಕ್ಕೆ ಮತ್ತು ತನ್ನ ಹೆಂಡ್ತಿಯನ್ನ ಪಟ್ಟಣಕ್ಕೆ ಹೋಗಿ ಸುತ್ತಿಸೋದಕ್ಕೆ ಅಂತ ಒಂದು ಸ್ಕೂಟರ್ ಕೊಂಡುಕೊಂಡಾಗ ಶಂಕರಯ್ಯನವರು ನಿಟ್ಟುಸಿರು ಬಿಟ್ಟು, ನಾವು ಇದೇ ಸಂತೆಗೆ ನಡೆದುಕೋಂಡು ಹೋಗಿ ನಡೆದುಕೊಂಡು ಬಂದು ಕಾಲುಗಳನ್ನ ಗಟ್ಟಿಮುಟ್ಟಾಗಿ ಇಟ್ಟುಕೊಂಡಿ ರ್‍ತಿದ್ದಿವಿ. ಈಗ ಇವರುಗಳು ಸ್ಕೂಟರ್ ಮೇಲ ಹೋಗಿ ಕೈಕಾಲು ಮುರ್ಕೊಂಡು ಬರ್‍ತಾರೆ ಅಷ್ಟೆ!" ಅಂತ ಅಂದರಂತೆ.

ಅವರ ಮೊಮ್ಮಗಳು ಬೇಸಿಗೆಯಲ್ಲಿ ಮಕ್ಕಳನ್ನ ಕರೆದುಕೊಂಡು ಬೆಂಗ ಳೂರಿನಿಂದ ಹಳ್ಳಿಗೆ ಬಂದಾಗ ಶಂಕರಯ್ಯನವರು "ಬೆಂಗಳೂರಿನಲ್ಲಿ ಎಲ್ಲಾ ಅನುಕೂಲವಾಗಿದೆಯೇನಮ್ಮಾ?" ಅಂತ ವಿಚಾರಿಸಿದಾಗ, ಅವಳು" ಜೀವನ ಸಾಗಿಸೋದೇ ಕಷ್ಟ ತಾತ. ಹಾಲು ಬಂದರೆ ನೀರಿಲ್ಲ. ನೀರು ಬಂದರೆ ಹಾಲಿಲ್ಲ" ಅಂತ ಅಂದಳಂತೆ. ಅದಕ್ಕೆ ಶಂಕರಯ್ಯ" ನಿಕಟ ಸಂಬಂಧಗಳು ಹೇಗೆ

ಬದಲಾಗುತ್ತೆ ನೋಡಮ್ಮ. ನಮ್ಮ ದಿನಗಳಲ್ಲಿ ಆಕಳಿಗೆ ಕೆಚ್ಚಲು ತುಂಬಿಲ್ಲ. ಅದಕ್ಕೆ ಇವತ್ತು ಹಾಲಿಲ್ಲ ಸ್ವಾಮಿ ಅಂತ ಆಳುಗಳು ಹೇಳೋರು. ಈಗ ನಲ್ಲೀಲಿ ನೀರು ಬಂದಿಲ್ಲ ಅದಕ್ಕೆ ಇವತ್ತು ಹಾಲಿಲ್ಲ ಅಂತ ಅಂತಾರೆ ಡೈರಿಯವರು" ಅಂತ ನಕ್ಕೊಂಡರಂತೆ.

ಈ ವರ್ಷದ ಆಗಸ್ಟ್ ತಿಂಗಳ ಒಂಭತ್ತರಂದು ನಮ್ಮ ಹಳ್ಳಿಯ ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಸ್ಮರಿಸಲು ಒಂದು ಪುಟ್ಟ ಸಮಾರಂಭ ನಡೆಯಿತು. ಎಂ. ಎಲ್. ಎ. ಗಾಂಧೀ–ಬ್ರಿಟಿಷರು. ಸ್ವಾತಂತ್ರ್ಯ ಅಂತೆಲ್ಲಾ ಭಾಷಣ ಹೊಡೆದ ಮೇಲೆ ಶಂಕರಯ್ಯನವರು ಎದ್ದು ಹೀಗೆ ಹೇಳಿದರು : "ನಮ್ಮ ಎಂ. ಎಲ್. ಎ. ಹೇಳಿದ ಹಾಗೆ ಕ್ವಿಟ್ ಇಂಡಿಯಾ ಚಳುವಳಿ ಖಂಡಿತ ವಾಗಿಯೂ ಸ್ಫೂರ್ತಿದಾಯಕವಾಗಿತ್ತು. ಆದರಿಂದ ಬರೇ ಬ್ರಿಟಿಷರು ಮಾತ್ರ ನಮ್ಮ ದೇಶ ಬಿಟ್ಟು ಓಡಿಹೋದರು ಅಂದ್ಕೋಬೇಡಿ. ಆ ಸ್ಫೂರ್ತಿಯಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಬಂದ ನಂತರ ನಮ್ಮ ಭಾರತೀಯರೂ ಕ್ವಿಟ್ ಇಂಡಿಯಾ ಮಾಡೋಕ್ಕೆ ಶುರುಮಾಡಿದ್ರು. ಸರ್ಕಾರದ ದುಡ್ಡಲ್ಲಿ ಓದು ಬರೆದು ಡಾಕ್ಟ್ರು ಇಂಜಿನಿಯರುಗಳಾಗಿ ಈ ದೇಶವನ್ನು ಬಿಟ್ಟು ಹೋಗಿದ್ದೇ ಹೋಗಿದ್ದೇ ! ಈಚೀಚೆಗೆ ಮನೆಯವರನ್ನೆಲ್ಲಾ ಬೇರೆ ಅಲ್ಲಿಗೇ ಕರಿಸ್ಕೋತಿದಾರೆ. ಈಗ ನಮ್ಮ ದೇಶದಲ್ಲಿ ನಮ್ಮ ಬಾವುಟ ಹಾರಿಸೋಕೆ ಉಳಿಕೊಂಡಿರೋವರು ಇಲ್ಲಿ ಕೂತಿರೋ ನಮ್ಮ ಎಂ.ಎಲ್.ಎ. ತರಹ ದವರು. ಮಿಕ್ಕಿದವರೆಲ್ಲಾ ನಮ್ಮ ಬಾವುಟಾನ ಅಮೇರಿಕಾದಲ್ಲೋ ಇಂಗ್ಲೆಂಡ್ ನಲ್ಲೋ ಹಾರಿಸ್ತಿದಾರೆ" ತಕ್ಷಣ ಆ ಎಂ.ಎಲ್.ಎ. ಕ್ವಿಟ್ ವಿಲೇಜ್ ಅಂತ್ಕೊಂಡು ಗಾಡಿ ಬಿಟ್ರು !

ಶಂಕರಯ್ಯನವರು ಪತ್ರಿಕೆಗಳಿಂದ ಈಚೀಚಿನ ಆಗುಹೋಗುಗಳನ್ನ ಬಹು ವಾಗಿಯೇ ಗ್ರಹಿಸಿದ್ದಾರೆ ಅನ್ನೋಕ್ಕೆ ಇನ್ನೊಂದು ಉದಾಹರಣೆ. ಅವರ ಮರಿ ಮಗ ತನ್ನ ಮಿತ್ರ ತಂಡದೊಂದಿಗೆ ಅವರ ಹತ್ತಿರ ಬಂದು "ತಾತ, ನಾವೆಲ್ಲಾ ಬಾರ್ಸಿ ಲೋನಾಗೆ ಹೋಗಿ ಹಾಕಿ ಮ್ಯಾಚ್ ಆಡ್ತೀವಿ" ಅಂತ ತಮಾಷೆಗೆ ಹೇಳಿದನಂತೆ. ಅದಕ್ಕೆ ಶಂಕರಯ್ಯನವರು "ಅಯ್ಯೋ ಪೆದ್ದು ಮುಂಡೇದೇ, ಬಾರ್ಸಿಲೋನಾ ತನಕ ಹೋಗಿ ಯಾರ್‍ಯಾರ ಕೈಲಿ ಹೇಳಕೇಳ ಹೊಡಸ್ಕೊಂಡು ಬರೋ ಬದಲು ಇಲ್ಲೇ ತಾಲ್ಲೂಕು ಖಚೇರಿ ಮೈದಾನಕ್ಕೆ ಹೋಗಿ ಆ ಕುಂಟ ರಂಗೇಗೌಡನ ಟೀಮ್‌ನ ಸೋಲಿಸ್ಕೊಂಡು ಬಾ. ನೀನು ಕೈಲಿ ಆ ಹಾಕಿಕೋಲು ಹಿಡ್ಕೊಂಡಿದ್ದು ಸಾರ್ಥಕ ವಾಗುತ್ತೆ" ಅಂತ ಅಂದರಂತೆ. ಇದು ನಡೆದದ್ದು ನಮ್ಮ ಭಾರತ ತಂಡ ಬಾರ್ಸಿ ಲೋನಾಗೆ ಹೋಗೊಕ್ಕೆ ಮುಂಚೆ. ಎಂತಹ ವೇದವಾಕ್ಯ ಆತನದು !

ನಾನು ಏನು ಹೇಳೋದಕ್ಕೆ ಹೊರಟೆ ಅಂದರೆ ಅಲ್ಲ, ಹೀಗೂ ಉಂಟು !

ಕಂಡದ್ದು ಹೇಳುವೆನು

ಎಚ್. ಕೆ. ರಘುನಾಥ್

ವೇದಗಳ ಪಠಣೆಯಿಂ ಬೇಸತ್ತವಿಪ್ರರಿಗೆ
ಬಿರುದು ಬಂದಿಹುದು ಭೋಜನಪ್ರಿಯರೆಂದು
ಬುದ್ಧಿ ಚಿಕ್ಕದು ಬೋಜ್ಜು ಬೆಳೆಯುತ್ತಬಂತು
ಕಂಡುದನು ಹೇಳುವೆನು ಕೋಪಬೇಡ —೧

ಉದ್ದನಾಮದ ಚಾರಿ ಅಡ್ಡನಾಮದ ಭಟ್ಟ
ಆಗಾಗ ಕಾದಾಡಿ ಕೊನೆಗು ಕಲೆತಿರದೆ
ಕ್ರಾಸ್ ಗುರುತಿಗಿಂದು ಅವಕಾಶ ಕೊಟ್ಟರು ನೋಡಿ
ಕಂಡುದನು ಹೇಳುವೆನು ಕೋಪಬೇಡ —೨

ಶ್ರೀನಿವಾಸ ಪೈನು ಶ್ರೀದೇವಿ ಸಲೂನು
ಶ್ರೀ ಗಣೇಶನ ಹೆಸರು ಬೀಡಿಗಳಿಗಿಟ್ಟು
ವ್ಯಾಪಾರ ಪಲಗೆಗಳ ವ್ಯಾಪಕವು ಹೆಚ್ಚಾಯ್ತು
ಕಂಡುದನು ಹೇಳುವೆನು ಕೋಪಬೇಡ —೩

ಗಾಂಧಿ ಟೋಪಿಯನಿಟ್ಟು ಖದ್ದರನು ಧರಿಸಿ
ಮಾಡ ಬಾರದ ಕೆಲಸ ಮಾಡಿದರೆ ಮಾಫಿ
ಸರ್ವರೋಗಗಳಿಗೆ ಸಂಜೀವಿನಿಯು ಖಾದಿ
ಕಂಡುದನು ಹೇಳುವೆನು ಕೋಪಬೇಡ —೪

ಸರಕಾರಿ ಬಸ್ಸಿನಲ್ಲಿ ಸೀಟುಗಳು ಐವತ್ತು
ನೋಸ್ಟ್ಯಾಂಡಿಗ್ ಎಂದು ಒಳಗೆ ಬರೆದಿತ್ತು
ಬಸ್ಸಿನಲಿ ಜನ ಸಂಖ್ಯೆ ನೂರಕ್ಕೆ ಹೆಚ್ಚಿತ್ತು
ಕಂಡುದನ್ನು ಹೇಳುವೆನು ಕೋಪಬೇಡ —೫

ಮಾಂಸ ಭಕ್ಷಣೆ ಮದ್ಯಪಾನಗಳು ಬೇಡೆಂದ
ಗಾಂಧಿ ಬುದ್ಧರು ಜನಿಸಿದೆಮ್ಮ ಭೂಮಿಯಲಿ
ಓಣಿ ಓಣಿಗೆ ಬ್ರಾಂಡಿ ಷಾಪುಗಳ ಓಪನಿಂಗ್
ಕಂಡುದನು ಹೇಳುವೆನು ಕೋಪಬೇಡ —೬

ನೋಡದೆಯೆ ಇಹನೆಂದರೊಪ್ಪಿ ಮುತ್ತಾಸನು
ನೋಡಿದರು ಸೃಷ್ಟಿಯನು ಇದಕೊಬ್ಬ ಕರ್ತೃ
ಇರುವನೆಂದರೆ ನಂಬನೇಕೊ ಈ ನಾಸ್ತಿಕನು
ಕಂಡುದನು ಹೇಳುವೆನು ಕೋಪಬೇಡ —೭



"ನಾನೀಗ ಯಾವ ಪಕ್ಷ
ಅಂತ ವಿಚಾರಿಸಿ ಹೇಳ್ತೀನಿ!"

ದರ್ಜಿ ಪುರಾಣ

ಶಾಂತಾರಘು

ಸತೀಶ ಮನೆ ಮುಂದೆ ಕಾರಲ್ಲಿ ಕೂತು ಕೂತು ಸುಸ್ತಾಗಿದ್ದ. ಹಾರನ್ ಹೊಡೆದೂ. ಹೊಡೆದೂ ಸಾಕಾಗಿತ್ತು. ರೇಷನ್ ಅಂಗ್ಡಿ ಪಾಪಾಯಿಲ್ ಥರಾ ಅವನ ತಾಳ್ಮೆ ಮಾಯವಾಗ್ತಾಯಿತ್ತು. ಎಲ್ಲಿ ಹೋದ್ಲು ಜಮುನ? ಈ ಹೆಂಗಸ್ರು ಚಾಳೀನೇ ಹೀಗೆ! ಎಷ್ಟು ಹೊತ್ತಾದ್ರೂ ರೆಡಿಯಾಗೊಲ್ಲ! ಏಳು ಗಂಟೆಗೆ ಪಾರ್ಟಿ. ಈಗಾಗ್ಲೇ ಆರೂವರೆ.

"ಜಮ್ಮೂ! ಜಮ್ಮೂ! ಅಂತ ಕೂಗಿದ.

ಹೊರಗೆ ಒಂಚೂರೇ ಇಣಿಕಿದ್ಲು ಹೆಂಡ್ತಿ. "ಸುಮ್ನೆ ಜಮ್ಮು, ಕಾಶ್ಮೀರ ಅಂತ ಕೂಗಿಕೋಬೇಡಿ. ನಾನು ಬರೋಕಾಗೊಲ್ಲ ಇವತ್ತು!"

"ಯಾಕೇ ಮಹರಾಯ್ತಿ! ಹೊಸಾ ಸೀರೆ ಬೇರೆ ತೊಗೊಂಡಿದ್ದೆ. ಇವತ್ತಿನ ಪಾರ್ಟಿಗೆ?"

"ಸೀರೆ ಏನೋ ಸರಿ! ಆದ್ರೆ ಬ್ಲೌಸು...

"ನೆನ್ನೆ ತಾನೇ ಟೆಯ್ಲರ್ ಅಂಗ್ಡಿಯಿಂದ ತಂದ್ಯಲ್ಲೇ?"

"ಆ ವಾಮನರಾಯ ಹಾಳಾದ! ಕುಲಗೆಡಿಸ್ಬಿಟ್ಟ ರವಿಕೇನ! ಬಿಗೀಂದ್ರೆ ಬಿಗಿ!"

"ಹೋಗ್ಲಿ ಬೇರೆ ಹಾಕ್ಕೊಂಬಾರೇ!" "ಆಗೊಲ್ಲಾಂದ್ರೆ!"

"why not?" ಹ್ಯಾಗೆ ಹೇಳೋದು ನಾಚಿಕೆಗೇಡನ್ನ? ಬ್ಲೌಸು ಎಷ್ಟು ಬಿಗಿಯಾಗಿತ್ತೂಂದ್ರೆ, ಹಾಕೊಳ್ಳೋವಾಗ ಅರ್ಧದಲ್ಲೇ ಹಿಡ್ಕೊಂಬಿಟ್ಟಿತ್ತು! ಮೇಲಕ್ಕೆ ಎಳೆಯೋಕೂ ಆಗ್ಲಿಲ್ಲ–ಕೆಳಕ್ಕೆ ಎಳೆಯೋಕೂ ಆಗ್ಲಿಲ್ಲ!

ಆ ವಾಮನರಾಯರಿಗೇನು ಕೇಡು ಬಂತು? ಹೋದ ಸಲ ಹೊಲಿದಿದ್ದ ರವಿಕೆ – ಕೆಲಸದ ನಿಂಗಿ ರೇಷನ್ ಅಂಗ್ಡೀಗೆ ಹಿಡ್ಕೊಂಡು ಹೋಗೋ ಜೋಳಿಗೆ ಚೀಲದ ತರಾ ವಿಪರೀತ ದೊಗಳೆಯಾಗಿತ್ತು. ಈ ಸಲ ಹಾಗೆ ಮಾಡ್ಬೇಡಾ ಅಂದ್ರೆ, ಹೀಗೆ ಕುತ್ತಿಗೆ ಹಿಸುಕೋ ಹಾಗೆ ಹೊಲಿಯೋದೆ?

ಕತ್ತರಿಯಿಂದ ಅಲ್ಲಿ ಇಲ್ಲಿ amputate ಮಾಡಿ ಹೊಸಾ ರವಿಕೆಯನ್ನು ತೆಗೆದಿದ್ದಾಯ್ತು. ಹೊಟ್ಟೆ ಉರಿದ್ಹೋಯ್ತು. ಮಾರನೇ ದಿನ ನಮ್ಮ ಲೇಡೀಸ್ ಕ್ಲಬ್‌ನಲ್ಲಿ ಎಲ್ರ ಹತ್ರಾನೂ ಹೇಳ್ಕೊಂಡು ಗೋಳಾಡಿದ್ಲು. ಆಶ್ಚರ್ಯ ಏನೂಂದ್ರೆ, ಅಲ್ಲಿದ್ದ ಲೇಡೀಸ್‌ಗೆಲ್ಲಾ ಇದೇ ಪ್ರಾಬ್ಲಂ! ಅಯ್ಯೊ! ನೆಟ್ಟಗೆ ಒಂದು ರವಿಕೆ ಹೊಲಿಯೋ ಟೆಯ್ಲರ್‌ಗೂ ಗತಿಯಿಲ್ವೆ ಈ ಊರಲ್ಲಿ?

"ನಂ ಟೆಯ್ಲರ್ ಭೀಮೋಜಿ ಇದಾನಲ್ಲಾ– ಅಸಾಧ್ಯದೋನಪ್ಪ! ಎಷ್ಟಿದ್ರೂ ಬಟ್ಟೆ ಸಾಲ್ದು, ಸಾಲ್ದೂಂತ ಬಡ್ಕೋತಾನೆ. 75 ಸೆಂಟಿಮೀಟರ್ ಒಂದ್ ರವಿಕೆ ಹೋಲಿಯೋಕಾಗೊಲ್ವೆ? ಇವರಿಗೆ ಒಂದು ಮೀಟರಿಲ್ದೆ ಕಟ್ಟೇ ಮಾಡೋಲ್ವಂತೆ. ಟೂ ಬೈ ಟೂ ಒಂದು ಮೀಟರ್‌ಗೆ ಅರವತ್ರೂಪಾಯಿ. ಏನು ಇವರಪ್ಪನ ಮನೆ ಗಂಟೇ ಹೋಗೋದು?" ಅಂತ ಪ್ರಭಾ ಬುಸುಗುಟ್ಟಿದಳು.

"ಪ್ರಭಾ! ಒಂದು ಜೋಕು ಕೇಳಿಲ್ವೆ ನೀನು? ಹೀಗೇ ಒಬ್ಬ ತನ್ನ ದರ್ಜಿ ಹತ್ರ ಜಗಳ ಆಡ್ತಿದ್ನಂತೆ. 'ಏನಯ್ಯಾ ನೀನು? ಎಷ್ಟು ಬಟ್ಟೆ ಕೊಟ್ರೂ, ಇನ್ನೂ 1 ಮೀಟರ್ ಬೇಕು. 2 ಮೀಟರ್ ಬೇಕೂಂತ ಸತಾಯಿಸ್ತೀಯಾ. ಅದೇ ನಿನ್ನ ಪಕ್ಕದಂಗ್ಡಿ ಟೆಯ್ಲರ್ ನೋಡು! ಯಾವತ್ತೂ $\frac{1}{2}$ ಮೀಟರ್‌ಗಿಂತ ಹೆಚ್ಚಿಗೆ ಕೇಳೋದೇ ಇಲ್ಲ!" ಆ ಟೆಯ್ಲರ್ರೋ, ನಮ್ಮ ಟಿ. ವಿ. ನಟರ ತರಾ expressionless ಆಗಿ ಮುಖ ಇಟ್ಕೊಂಡು, ಹೇಳಿದ್ನಂತೆ "ಏನ್ಸಾರ್ ಮಾಡೋದು? ಅವನ ಮಗೂಗೆ ಆರೇ ತಿಂಗ್ಳು! ನನ್ನ ಮಗಂಗೆ ಆರು ವರ್ಷ!" ಅಂತ"

ಗೀತಳ ಜೋಕು ಕೇಳಿ ಕೆಲವರು ಗೊಳ್ಳನೆ ನಕ್ಕರು. "ಏನು ಗೋಳಪ್ಪ ನಿಜವಾಗ್ಲೂ! ಯಾರೂ ಸರ್‍ಯಾಗಿ ಹೊಲಿಯೊಲ್ಲ. ಒಂದ್ಕಡೆ ಗುಬ್ಬಳಿ, ಇನ್ನೊಂದ್ಕಡೆ ಸುಕ್ಕು. ಇಲ್ಲಿ ಟೈಟು, ಅಲ್ಲಿ ಲೂಸು. ಮೊನ್ನೆ ನನ್ನ ಟಪ್ಪೂ back-button blouse ಅನ್ನ ಕುಲಗೆಡಿಸ್ಬಿಟ್ಟ ನಂ ಟೆಯ್‌ಲರ್ರು. ಆ ಕಡೆ ರವಿಕೇನೂ ಅಲ್ಲ, ಈ ಕಡೆ ಜುಬ್ಬಾನೂ ಅಲ್ಲ. ಏನೋ ಒಂಥರಾ inbetween ಇತ್ತು! ಕುದುರೇನೂ ಅಲ್ಲ, ಕತ್ತೇನೂ ಅಲ್ಲ. ಹೇಸರಗತ್ತೆ ಅಂತಾರಲ್ಲ ಹಾಗೆ! ಅಷ್ಟು perfect ಆಗಿ ಮಸಲಾ ಒಂದು ರವಿಕೇನ ಹಾಳು ಮಾಡಬೇಕಾದ್ರೆ, ನಿಜವಾಗ್ಲೂ ಅವನೊಬ್ಬ A-grade ಈಡಿಯಟ್ಟೇ ಇರ್ಬೇಕು!" ರಮಾ ಕಟಕಟನೆ ಸಶಬ್ದವಾಗಿ ಹಲ್ಲು ಕಡಿದ್ಲು, "ಶುದ್ಧ ಗೂಬೆ, ಥ್ರಾಭೆ ಟೆಯ್ಲರ್ರು!" ನಮ್ಮ ರಮಾ ಒಂಥರಾ human Computer ಉ.ತನ್ನ word processorನಲ್ಲಿ ಒಂದು ಬಯ್ಗಳ file ಅನ್ನೇ ಇಟ್ಕೊಂಡಿದಾಳೆ! ಆಗಾಗ ತಕ್ಕ ಸಂದರ್ಭದಲ್ಲಿ ಹೀಗೆ ಒಂದೆರಡು appropriate ಶಬ್ದಗಳನ್ನು release ಮಾಡ್ತಾಳೆ! ಅಸೆಂಬ್ಲಿ ಸೆಷನ್

ಸೀಸನ್‌ನಲ್ಲಿ, ಪರಾಸ್ಟ ಮೆಂಬರುಗಳು ನಮ್ಮ ರವಿಕೆ ಬಯಗ್ಗಳ file ಅನ್ನ refer ಮಾಡಬಹುದು !

ಡಾಕ್ಟರ ಹೆಂಡತಿ ಲಲಿತಾ, "Back-button ರವಿಕೆ ಅಂದ ಕೊಡ್ಲೆ ಜ್ಞಾಪ್ಕ ಬಂತು ನೋಡ್ರಿ ! ಮೊನ್ನೆ ನಮ್ಮ ಎದುರ್ಮನೇವರು ಸಂಜೆ 5 ಗಂಟೇಲಿ ಹೆಂಡ್ತೀನ ಕರಕೊಂಡು ಓಡಿಬಂದ್ರು. 'ಡಾಕ್ಟ್ರೇ ! ಏನಾದ್ರೂ ಮಾಡಿ. ನನ್ ಹೆಂಡ್ತೀಗೆ ಕೈ ಉಳುಕಿ ಹೋಗಿ, ಆಚೆ ಈಚೆ ಅಲ್ಲಾಡ್ಸೋಕೇ ಆಗ್ತಾಯಿಲ್ಲ!" ಅಂದ್ರು ಗಾಭರಿ ಯಿಂದ, ನಮ್ಮೆಜಮಾನ್ರು ಆಕೆಗೆ ಯಾವುದೋ ಮಾತ್ರೆ ಕೊಟ್ಟು "ಯಾಕಮ್ಮಾ ! ಏನಾದ್ರೂ ಭಾರಗೀರ ಎತ್ತಿದ್ರಾ?' ಅಂದ್ರು. 'ಅಯ್ಯೋ ! ಯಾಕ್ಕೇಳ್ತೀರಾ ಡಾಕ್ಟ್ರೇ ? ಹೊಸ್ದಾಗಿ back button blouse ಅಂತ ಏನೋ ಹೊಲಿ ಸ್ಕೊಂಡಿದಾಳೆ. ಆ ಗುಂಡಿಗಳನ್ನ ಹಾಕ್ಕೊಳ್ಳೋಕೆ ಹೋಗಿ, ಕೈ ಹ್ಯಾಗೆ ಹ್ಯಾಗೋ ತಿರುಗ್ಸಿ, ಹೀಗ್ಮಾಡ್ಕೊಂಡಿದಾಳೆ ! ಏನ್ ಹೆಂಗಸ್ರೋ!" ಅಂತ ಗೊಣಗಿಕೊಂಡೇ ಹೆಂಡ್ತೀನ ಎಳ್ಕೊಂಡು ಮನೆಗೆ ಹೋದ್ರು!" ಲಲಿತಳ ಕತೆ ಕೇಳಿ ಲೇಡೀಸ್ ಎಲ್ಲ ಕಿಲಕಿಲನೆ ನಕ್ಕು ಆನಂದಪಟ್ರು.

ಜಮುನಾ ಮಾತ್ರ ನಗಲಿಲ್ಲ. 60, 70 ರೂಪಾಯಿ ರವಿಕೆ ಹಾಳಾಗಿತ್ತಲ್ವೆ ಈಗ್ತಾನೆ ? "ನಿಮ್ಗೆಲ್ಲಾ ನಗು ! ನನ್ನ ಸಂಕ್ಟ ಯಾರಿಗೆ ಹೇಳ್ಲಿ ? ಮುಂದಿನ ತಿಂಗಳು ನನ್ತಂಗೀ ಮದ್ವೆ. Decent ಆಗಿ ನಾಕು blouse ಹೊಲಿಸ್ಕೊಳ್ಳಲೇ ಬೇಕು. ಏನ್ಮಾಡ್ಲಿ ? ಇನ್ನು ಆ ವಾಮನರಾಯ ಮುಖ ಅಂತೂ ನೋಡೊಲ್ಲ" ಅಂತ ಒಂದೇ ಸಮನೆ ಹಲುಬಿದ್ಲು.

ಲಾಯರ್ ಹೆಂಡ್ತಿ ವಿಶಾಲಿ "ಜಮುನಾ ! ನನ್ನ ಕಸಿನ್ ಹೇಳಿದ್ಲು. ಯಾರೋ Fashion Tailors ಅಂತೆ. ಕಂಟೋನ್ಮೆಂಟಿನಲ್ಲಿ, ಬೆಸ್ಟ್ ಆಗಿ ಹೊಲೀತಾನಂತೆ. Try ಮಾಡ್ತೀರಾ ? ಆ ಮಹರಾಯ ಬಲು busy ಅಂತೆ. ಫೋನ್ ಮಾಡಿ ಅಪಾಯಿಂಟ್‌ಮೆಂಟ್ fix ಮಾಡ್ಕೊಬೇಕಂತೆ" ಅಂದ್ಲು.

ಸರಿ, ನೋಡೇ ಬಿಡೋಣ ಅಂತ ಜಮುನ ಮಾರನೆಯ ದಿನಕ್ಕೆ fix ಮಾಡ್ಕೊಂಡು, ನನ್ನೂ ಜತೇಗೆ ಎಳ್ಕೊಂಡೇ ಹೋದ್ಲು.

ಬಲು Posh ಅಂಗಡಿ. ಜಿಗಿ ಜಿಗಿ ಜನ. ಹತ್ತಾರು ದರ್ಜಿಗಳು ದಢ ದಢನೆ ಹೊಲೀತಾಯಿದ್ರು. Fashion Magazine ಗಳು ಎರಚಾಡಿದ್ವು ಡಜನ್‌ಗಟ್ಲೆ.

ಅಸಿಸ್ಟೆಂಟ್ ಒಬ್ಬ ಬಂದು "ಏನ್ ಮೇಡಂ?" ಅಂದ. ಬಂದ ವಿಷಯ ಹೇಳಿದ್ವಿ. "ಕೂತ್ಕೊಳ್ಳಿ. ಬಾಸ್ ಬಿಜಿ ಆಗಿದಾರೆ" ಅಂತ ಬೆಣ್ಣೆ ಹಚ್ಚಿದಂತೆ ಹೇಳಿ ಹೋದ.

ಓಹೊಹೋ ! ಇದೇನು ಮುಖ್ಯ ಮಂತ್ರಿಗಳನ್ನು ಮೀಟ್ ಮಾಡೋಕಿಂತ ಕಾಂಪ್ಲಿಕೇಟೆಡ್ ಆಗಿದ್ಯಲ್ಲಾ ಅಂದ್ಕೊಂಡು ಕೂತಿದ್ವಿ. ಜಮುನಾ ಏನೋ ಭಾರೀ impress ಆದ ಹಾಗೆ ಕಾಣಿಸ್ತಿತ್ತು. ಮತ್ತೆ ಇಷ್ಟೆಲ್ಲಾ grand ಆಗಿರೋ ದರ್ಜಿ ಷ್ಯಾರ್ ಆಗಿ ಚೆನ್ನಾಗೇ ರವಿಕೆ ಹೊಲಿಬೇಕು ಅಲ್ವೆ ?!

ಹತ್ತು ನಿಮಿಷದಲ್ಲಿ ಶಿಷ್ಯ ಬಂದು, ನಮ್ಮನ್ನ escort ಮಾಡ್ಕೊಂಡು ಚೀಫ್ ಟೆಯ್ಲರ್ ಇದ್ದ ಗರ್ಭಗುಡೀಗೆ ಕರ್ಕೊಂಡು ಹೋದ. ಆ ಚೀಫ್ರೋ ರಾಕೋ ಠೀಕಾಗಿದ್ದ. ಕತ್ತಿನ ಸುತ್ತ ಇಂಚ್ ಟೇಪು. ನಾಗಪ್ಪನ್ನ ಸುತ್ಕೊಂಡಿರೋ ಸಾಕ್ಷಾತ್ ಪರಮೇಶ್ವರನ್ನ ಥರಾನೇ ಇದ್ದ. "ಭಕ್ತನೇ ! ಏನು ವರ ಬೇಕೋ ಕೇಳು ವಂತಹನಾಗು!" ಅನ್ನುವ ಕೃಪಾಕಟಾಕ್ಷವನ್ನ ನಮ್ಮ ಮೇಲೆ ದಯಪಾಲಿಸಿದ.

ಜಮುನ ಲಗುಬಗೆಯಿಂದ ತಂದಿದ್ದ ಆರು ಬ್ಲೌಸ್ ಪೀಸ್‌ಗಳನ್ನ ಅವನ ಮುಂದೆ ಹಾಕಿ "ಇಲ್ಲಿ ಆರು ಪೀಸ್‌ಗಳಿವೆ. ಕರೆಕ್ಟಾಗಿ ಹೊಲ್ಕೊಡ್ಬೇಕು... ಅನ್ನು ವಷ್ಟರಲ್ಲಿ ಆ ಫ್ಯಾಷನ್ ಟೆಯ್ಲರ್ರು "ಎಸ್ ಮೇಡಂ ! ಯಾವ ಥರಾ ಬ್ಲೌಸ್‌ಬೇಕು? ಹೈ ನೆಕ್, ಲೋ ನೆಕ್, ವೀ ನೆಕ್, ರೌಂಡ್ ನೆಕ್, ಸ್ಕ್ವಯರ್ ನೆಕ್, ಬೋಟ್ ನೆಕ್, ವಿಂಡೋ ನೆಕ್, ಸ್ಕಾಲಪ್ ನೆಕ್, ಬ್ಯಾಕ್‌ಲೆಸ್ ರವಿಕೆ, ವೆಂಟಿಲೇಟರ್ ಬ್ಲೌಸ್ ಸ್ಲೀವ್‌ಲೆಸ್, ಲಾಂಗ್ ಸ್ಲೀವ್ಸ್, ಪೋಲ್ಕೋ ನೆಕ್, ಸಾದಾ ಬ್ಲೌಸ್, ಕಟೋರಿ ಬ್ಲೌಸು, Front button, back button.... ಅಂತ ರೈಲ್ ಥರಾ ರೀಲ್ ಬಿಡ್ತಾ ಹೋದ.

ನಮಗೇ ಉಸಿರು ಕಟ್ತು ! ಜಮುನಾ ಬೆವರೊರಸ್ಕೊಂಡು ಅವಸರವಸರವಾಗಿ "ನೋಡಿ ಇವ್ರೆ ! ಅಳತೆ ರವಿಕೆ ತಂದಿದೀನಿ. ಅದೇ ತರ ಹೊಲೀರಿ" ಅಂದ್ಲು.

ಆತ ಬ್ಲೌಸ್ ಪೀಸ್‌ಗಳನ್ನ ಬಿಚ್ಚಿ ನೋಡ್ದ.

"ಏನ್ ಮೇಡಂ ? ಎಷ್ಟು ತಂದಿದೀರಿ ಬಟ್ಟೆ ? "

"ಯಾಕೆ ? ಯಾವಾಗ್ಲೂ ನಾನು 80 ಸೆಂಟಿಮೀಟರ್ರೇ ತರೋದು !"

"80 ಸೆಂಟಿ ಮೀಟರ್ರೇ ? ನಿಮ್ಗೇ ?"

"ಹೂಂ! ಯಾಕೆ?"

ಮಹರಾಯ ಉತ್ತರಾನೇ ಕೊಡ್ಲಿಲ್ಲ. ಮೇಲೆ ನೋಡ್ದ. ಕೆಳಗೆ ನೋಡ್ದ. ಜಮುನಾ ಕಡೇನೂ ಒಂದ್ಸರಿ ನೋಡ್ದ.

ಜಮುನಾಗೆ ಜಾಣತನ ಸಾಲ್ದು. ಕೈ ತೋರ್ಸಿ ಅವಲಕ್ಷಣಾಂತ ಯಾಕೆ ಅನ್ನಿಸ್ಕೊಂಡ್ಳೋ? ಪಾಪ! ಜಮುನಾ Weight 80 Kg. – in other words– ದಪ್ಪ. ಆದ್ರೂ ಅದನ್ನ indirect ಆಗಿ ಹೇಳೋಕೆ ಈ ಟೆಯ್ಲರಿಗೆಷ್ಟು ಧೈರ್ಯ! ಜಮುನಾಗೆ ಸಿಟ್ಟು ಏರಿತು. "ಏನ್ರೀ ಹಾಗಂತೀರಾ? ಆ ಚಂದ್ರಾ Cut piece Centre ನಲ್ಲೇ ನಾನು ಬಟ್ಟೆ ತೆಗ್ಯೋದು. ಅಲ್ಲೇ ಟೆಯ್ಲರ್ ಹೇಳಿದ್ರು ಮತ್ತೆ– 80 ಸೆ. ಮೀ. ಸಾಕೂಂತ?"

"ಅಯ್ಯೋ! ಆ ಚಂದಾ Cut piece ಟೆಯ್ಲರ್‌ಗೆ ಬುದ್ಧಿ ಇಲ್ಲ – ಬುದ್ಧಿ ಇದ್ರೂ ಕಣ್ಣಿಲ್ಲ- ಅಂತ ನಮ್ಮ ಫ್ಯಾಷನ್ ಟೆಯ್ಲರ್ ವ್ಯಂಗ್ಯ ಮಾಡ್ಲಿಲ್ಲ ಓಪನ್ನಾಗಿ. ಬಲು ಸಭ್ಯ, Polite ಪಾಪ. ಬರಬರನೆ ಟೇಬಲ್ ಮೇಲಿದ್ದ ಬಟ್ಟೇನ ಕತ್ತರಿಸೋಕೆ ಶುರು ಮಾಡ್ದ. ಬಂದ ಕೆಲ್ಸ ಮರ್ತು ನಾವೂ ನೋಡೇ ನೋಡಿದ್ವಿ. ಅಬ್ಬಬ್ಬ! ಅದೇನು ಕೈ ಚಳಕ! Superfast ಆಗಿ ಮಡಿಚೋದೇನು, ಗೆರೆ ಎಳೆಯೋದೇನು, ತಿರುಗ್ಸೋದೇನು, ಚಕಚಕನೆ ಕತ್ತರಿಸೋದೇನು! ಆ ಕತ್ತರೀನ ಬಳಸೋ ನಯ ವಿನಯ ಏನು! ಸ್ಟೆತಾಸ್ಕೋಪಿನ ತರಾ ಕತ್ತಿನ ಸುತ್ತ ಟೇಪು, ಕೈಯಲ್ಲಿ ಮಿಂಚೋ ಕತ್ತರಿ, ಆ ರೀತಿ! ಯಾವ Surgeonಗೆ ಕಡಮೆ ಬಿಡಿ–ಈ ಬಟ್ಟೆ ಡಾಕ್ಟರು!

"ಸರಿ, ಎಷ್ಟು ತರ್ಬೇಕು ಹೇಳ್ಬಿಡಿ" ಅಂದ್ಲು ನಿಂತು ಸುಸ್ತಾದ ಜಮುನ.

"$1\frac{1}{2}$ ಮೀಟರ್‌ಗೆ ಕಡಮೆ ಆಗೊಲ್ಲ ಮೇಡಂ..." ದಪ್ಪ ರಿಜಿಸ್ಟರ್ ತೆಗೆದು ನೋಡಿ "ಇನ್ನೂ ಎರಡು ತಿಂಗ್ಳಿಗೆ full book ಆಗಿದೆ. ಆಮೇಲೆ ಬೇಕಾದ್ರೆ ಹೊಲ್ಕೊಡ್ತೀನಿ–" ಅಂತ ಹೇಳ್ದೊಡನೇ ಮತ್ತೆ ಚಕಚಕನೆ ಬಟ್ಟೇನ amputate ಮಾಡೋಕೆ ಶುರು ಮಾಡ್ದ.

ತೆಪ್ಪಗೆ ಇಬ್ರೂ ಹೊರಗೆ ಬಂದ್ವಿ "ಎಷ್ಟು ಧಿಮಾಕು ನೋಡಿದ್ಯಾ? ಏನು George Bush ಅಂದ್ಕೊಡಿದಾನಾ ಮನಸ್ನಲ್ಲಿ? ಎರಡು ತಿಂಗ್ಳಾದ್ಮೇಲೆ appointment ಕೊಡ್ತಾನೆ!" ಅಂತ ಜಮುನಾ ದುಂಡಗಿದ್ದ ಮುಖಾನ ಇನ್ನೂ ದುಮ್ಮಿಸಿಕೊಂಡ್ಳು.

ಹೋದ ದಾರೀಗೆ ಸುಂಕ ಇಲ್ಲಾಂತ ತಿರುಗಿ ಬಂದಾಗ, ಮನೆ ಹತ್ರ ಸುಬ್ಬತ್ತೆ ಸಿಕ್ರು. "ಏನ್ರೀಮ್ಮಾ! ಆಯ್ತು outing?" ಅಂದ್ರು.

ಜಮುನಾ ತನ್ನ ಗೋಳು ತೋಡಿಕೊಂಡ್ಳು. ಹ್ಯಾಗೆ ತನ್ನ ತಂಗಿ ಮದ್ವೇಗೆ ತನಗೆ ಒಂದು ರವಿಕೇಗೆ ಗತಿಯಿಲ್ಲದಂತಾ ದುರ್ಗತಿ ಬಂತು–ಹ್ಯಾಗೆ ಬೆಂಗಳೂರಲ್ಲಿ ದರ್ಜಿಗಳ ಭೀಕರ ಬರಗಾಲ ಬಂದೊದಗಿದೆ–ಹ್ಯಾಗೆ...

"ತ್ಸು! ತ್ಸು! ಪಾಪ! ಎಂಥಾ ಕಷ್ಟ ಬಂತಮ್ಮ ನಿಂಗೆ! ಅಂದ್ಹಾಗೆ ಜಮುನಾ, ಮೆರಿಟ್ ಸೂಯಿಂಗ್ ಮೆಷೀನ್ ಇತ್ತಲ್ಲಾ ನಿಮ್ಹತ್ರಾ–ಏನಾಯ್ತು ?"

"ಇದೆ ಅತ್ತೆ! ಆದ್ರೆ ಹೊಲಿಯೋಕೆ ಪುರಸೊತ್ತೇ ಆಗೊಲ್ಲಾ...

ಸುಬ್ಬತ್ತೆ ಸೊಂಟದ ಮೇಲೆ ಕೈಯಿಟ್ಟು ಒಂದು Laser ನೋಟ ಬೀರಿದ್ರು. "ಪುರಸೊತ್ತಿಲ್ವೆ ? ಲಕ್ಷಣವಾಯ್ತು! ಆಡೋಕೆ ಬರ್ದೇ ಇದ್ದ ಯಾವೋಳೋ ಅಂಗಳ ಸಾಲ್ದು ಅಂದ್ಲಂತೆ! ನಿಮ್ಮ ಈ ಸೋಮಾರಿತನದಿಂದ್ಲೇ, ಟೆಯ್ಲರ್‌ಗಳೆಲ್ಲಾ ನಿಮ್ಮನ್ನ ಹೀಗೆ ಸತಾಯಿಸ್ತಾಯಿರೋದು! ಇಂಥಾ ಮೈಗಳಿರೆಲ್ಲಾ ಹ್ಯಾಗೆ ತಮ್ಮ ಮೇಲೆ depend ಆಗಿದಾರೇಂತ ಗೊತ್ತವ್ರಿಗೆ! ಅಲ್ಲಾ–ಈಗಿನ ಕಾಲದ ಲೇಡೀಸ್‌ಗೆ, ಮನೆ ಒಳಗೆ, ಹೊರಗೆ ಕೆಲ್ಸ ಜಾಸ್ತೀನೇ. ಒಪ್ಕೊಂಡೆ. ಆದ್ರೂ ಜಮುನಾ, ನೀನು ವಾರಕ್ಕೊಮ್ಮೆ ತಪ್ಪದೆ ಕ್ಲಬ್ಬು, ಸಿನಿಮಾ, ಡ್ರಾಮಾ, ಷಾಪಿಂಗ್, ಕಿಟ್ಟಿ ಪಾರ್ಟಿ, ಪಪ್ಪಿ ಪಾರ್ಟಿ, ಅದೂ, ಇದೂಂತ ರೆಗ್ಯುಲರ್ ಆಗಿ ಪ್ರೋಗ್ರಾಂ ಹಾಕ್ಕೋತಿಯಲ್ಲ! ಹಾಗೇ ವಾರಕ್ಕೊಮ್ಮೆ ಎರಡು ಗಂಟೆ ಹೊತ್ತು ಹೊಲಿಯೋದೂಂತ ರೆಗ್ಯುಲರ್ ರೊಟೀನ್ ಇಟ್ಕೊ!. ಹೀಗೆ ಟೆಯ್ಲರ್‌ಗಳನ್ನ ಹುಡಿಕ್ಕೊಂಡು ಗಲ್ಲಿಗಲ್ಲಿ ಅಲೆಯೋ ಟೈಮಲ್ಲಿ, ಮನೇಲಿ ಮುಸುಕು ಹಾಕಿಟ್ಟಿರೋ, ಮೆಷಿನ್‌ನನು ಉಪಯೋಗಿಸಿದ್ರೆ–ಡಜನ್‌ಗಟ್ಲೆ ರವಿಕೆಗಳನ್ನು ದಿವಿನಾಗಿ ಹೊಲ್ಕೋಬಹುದು ನಿಮಗೆ ಬೇಕಾದ ಹಾಗೆ ರವಿಕೇನೂ ಸಿಗತ್ತೆ ಹೀಗೆ ದರ್ಜಿಗಳನ್ನು ದೂರೋದೂ ತಪ್ಪತ್ತೆ. ಈ ವಯಸ್ನಲ್ಲಿ ನನ್ನ Handmachineನಲ್ಲಿ ನಾನೇ ರವಿಕೆ ಹೊಲ್ಕೋ ಸೀತಿ! ಗೊತ್ತೆ ? ಪುರಸೊತ್ತಿಲ್ವಂತೆ! ನಾಚಿಗ್ಗೇಡು!" ಅಂತ ಒಂದು ಭೀಷಣ ಭಾಷಣ ಮಾಡಿ, ಸುಬ್ಬತ್ತೆ ನಡೆದರು.

ಉದಾರ ಮನಸ್ಸಿನಿಂದ ಉಗಾದಿ ಸಂಚಿಕೆಗೆ ಜಾಹಿರಾತುಗಳನ್ನು
ನೀಡಿದ ಈ ಕೆಳಗಿನ ವ್ಯಕ್ತಿ / ಸಂಸ್ಥೆಗಳನ್ನು "ಅಪರಂಜಿ" ಕೃತಜ್ಞತೆಯಿಂದ
ನೆನೆಯುತ್ತಾಳೆ

1 ಮೆಟಲ್ ಪವರ್ (ಇಂಡಿಯಾ) ಪ್ರೈ. ಲಿಮಿಟೆಡ್

2 ಮೆಷಿನ್ ಎಲಿಮೆಂಟ್ಸ್

3 ಪ್ರಿಸಿಷನ್ ಪ್ರಾಡಕ್ಟ್ಸ್

4 ಪಿ.ಜಿ.ಕೆ. ಅಸೋಸಿಯೇಟ್ಸ್

5 ರೋಲ್‌ಮನ್ ಟ್ರೇಡಿಂಗ್ ಕಂಪನಿ

6 ಜಾಯ್ ಇಂಡಸ್ಟ್ರೀಸ್

7 ಶೇಷಾದ್ರಿ ಅಂಡ್ ಕಂಪನಿ

8 ಸಿ. ಗುರುಸಿದ್ದಪ್ಪ ಅಂಡ್ ಸನ್ಸ್

9 ದಿ ಮೈಸೂರ್ ಕನ್‌ಸ್ಟ್ರಕ್ಷನ್ ಕಂಪನಿ

10 ಆರ್. ವಿ. ಅಪಾರ್ಟ್‌ಮೆಂಟ್ಸ್

11 ಕೇಲಚಂದ್ರ ಮೆಷೀನ್ಸ್

12 ಕೆ. ಎನ್. ರಂಗಸ್ವಾಮಿ

13 ಎನ್. ವೆಂಕೋಬರಾವ್

14 ಯಕ್ಷ ದೇಗುಲ

15 ಫೈನ್ ಕ್ರಾಫ್ಟ್ಸ್

16 ಶ್ರೀಮತಿ ಸುಧಾ ರಾಮಕೃಷ್ಣ

17 ಶ್ರೀ ಎಚ್ ಆರ್. ಶ್ರೀನಿವಾಸ್

18 ಶ್ರೀ ತಲ್ಲಂ ವೆಂಕಟೇಶ್

19 ಎನ್. ಎಸ್. ಗಿರಿಮಾಜಿ ಅಂಡ್ ಸನ್ಸ್

20 ಶ್ರೀ ಕೆ. ಟಿ. ನಾರಾಯಣ್ ಮತ್ತು ಶ್ರೀಮತಿ ಪ್ರಫುಲ್ಲ

21 ಸೀಲಿನ್ ಇಂಡಸ್ಟ್ರೀಸ್

22 ಲಯನ್ ಪಿ. ಎಸ್. ಪ್ರೇಮನಾಥ್

23 ಮಾರ್ಬೆಲ್ಲೋ

24 ಎಸ್.ವಿ.ಆರ್ ಏಜನ್ಸೀಸ್

25 ರವಿ ಗ್ರಾಫಿಕ್ಸ್

26 ಕರ್ನಾಟಕ ಇನ್ಸೆಕ್ಟಿಸೈಡ್ಸ್ ಅಂಡ್ ಫಂಗಿಸೈಡ್ಸ್

27 ಮಾನ್‌ಕಾಟ್ ಆಗ್ರೊ ಕೆಮಿಕಲ್ಸ್

28 ಯು. ಐ ಪ್ಲಾಸ್ಟ್ ಪ್ರೈ. ಲಿಮಿಟೆಡ್

REGISTERED No. BGW - 180

Printed by V.R. NATH for the Publisher M. SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003. Editor: M. SHIVA KUMAR